ಕೊಂಡು ಹೋಗುವುದಕ್ಕೆ ಬದಲು ೩ ವರ್ಷ ೫ ವರ್ಷಗಳ ಕಾಲಕ್ಕೆ ಒಟ್ಟಿಗೆ ಪರವಾನಿಗೆ ಬೇಕೆಂದು ತೆಗೆದುಕೊಂಡು ಬಂದು ಆ ಸಮಯದಲ್ಲಿ ವಕ್ಫ್ ಬೋರ್ಡ್‌ಗೆ ಸೇರ ಬೇಕಾಗಿರತಕ್ಕಂಥ ಆಸ್ತಿ ಪಾಸ್ತಿ ಗಳನ್ನು ಸೇರಿಸಿಕೊಳ್ಳುವುದಕ್ಕೆ ವ್ಯವಸ್ಥೆ ಮಾಡಬಹುದಾಗಿತ್ತು. ಆದುದರಿಂದ ಈಗಲಾದರೂ ತಿದ್ದುಪಡಿ ತಂದು ಇದರ ಬಗ್ಗೆ ಪರ್ಯಾಲೋಚನೆ ಮಾಡಿ ಎಂದು ಹೇಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರೇನು ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದಾರೆ ಅದನ್ನು ಗಮನದಲ್ಲಿಟ್ಟು ಕೊಳ್ಳುತ್ತೇವೆ. ಅದೇ ರೀತಿಯಾಗಿ ಮಾಡಬೇಕೆಂದು ನಾವು ಸಹ ಆಸೆಪಟ್ಟಿದ್ದೆವು ಆದರೆ ಮನುಷ್ಯನ ಕಾರ್ಯ ಚಟುವಟಿಕೆಗಳಲ್ಲಿ ಕಾನೂನು ರೀತ್ಯಾ ನಡೆದುಕೊಳ್ಳ ಬೇಕೆಂದು ಇದ್ದರೂ ಕೂಡ ಒಂದಲ್ಲ ಒಂದು ರೀತಿಯಾಗಿ ಕಾನೂನು ಮೀರಿ ಹೋಗತಕ್ಕ ಸನ್ನಿವೇಶ ಗಳಿರುತ್ತವೆ. ಇದು ಮಾನ್ಯ ಸದಸ್ಯರಾದ ಶ್ರೀ ರಾಮಕೃಷ್ಣರವರು ವಕೀಲರು ಅವರಿಗೂ ಗೊತ್ತಿದೆ. ಆದರೂ ಕೂಡ ಮಾನ್ಯ ಸದಸ್ಯರುಗಳು ಕೊಟ್ಟರತಕ್ಕಂಥ ಸಲಹೆಗಳನ್ನು ಗಮನದಲ್ಲಿಟ್ಟುಕೊಳ್ಳ ಲಾಗುವುದು. ಈಗ ವಕ್ಫ್ ಸಂಸ್ಥೆಗಳಿಗೆ ಸೇರಿದಂಥ ಆಸ್ತಿಗಳು ಪರಭಾರೆ ಆಗದ ರೀತಿಯಲ್ಲಿ ರಕ್ಷಣೆ ಕೋರಿ ಕೋರ್ಟಿಗೆ ಹೋಗಿ ಅವುಗಳನ್ನು ವಶಪಡಿಸಿಕೊಳ್ಳುವುದಕ್ಕೆ ಕಾಲ ಮಿತಿಯನ್ನು ವಿಸ್ತರಣೆ ಮಾಡಬೇಕಾಗಿ ರುವುದರಿಂದ ದಯವಿಟ್ಟು ಇದಕ್ಕೆ ಮಾನ್ಯ ಸದಸ್ಯರು ಒಪ್ಪಿಗೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಉಪಾಧ್ಯಕ್ಷರು.— ಪರ್ಯಾಲೋಚನಾ ಪ್ರಸ್ತಾವನನ್ನು ಈಗ ಸಭೆಯ ಮುಂದಕ್ಕೆ ಹಾಕುತ್ತೇನೆ.

ಪ್ರಸ್ತಾವ ಏನೆಂದರೆ "The Public Wakfs (Extension of Limitation) (Karnataka Amendment) Bill 1983 ನ್ನು ಪರ್ಯಾಲೋಚಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಖಂಡಗಳ ಪರ್ಯಾಲೋಚನೆ

ಖಂಡ - ೨

ಉಪಾಧ್ಯಕ್ಷರು.—ಪ್ರಸ್ತಾವನೆ ಹೀಗಿದೆ.—

"ಖಂಡ ೨. ಈ ವಿಧೇಯಕದ ಭಾಗವಾಗಿರುತ್ತದೆ

(ಪ್ರಸ್ತಾವನೆ ಅಂಗೀಕಾರವಾಯಿತು)

(ಖಂಡ ೨ನ್ನು ಈ ವಿಧೇಯಕದಲ್ಲಿ ಸೇರಿಸಲಾಯಿತು)

ಖಂಡ ೧ ಇತ್ಯಾದಿ

ಉಪಾಧ್ಯಕ್ಷರು.—ಪ್ರಸ್ತಾವನೆ ಹೀಗಿದೆ.— 'ಮೊದಲನೆಯ ಖಂಡ, ದೀರ್ಘಶೀರ್ಷಿಕೆ ಮತ್ತು ಪೀಠಿಕಾ ವಿಭಾಗ ಇವುಗಳನ್ನು ಈ ವಿಧೇಯಕದಲ್ಲಿ ಸೇರಿಸಲಾಗಿದೆ'

ಪ್ರಸ್ತಾವನೆ ಅಂಗೀಕರಿಸಲಾಯಿತು

(ಮೊದಲನೆಯ ಖಂಡ, ದೀರ್ಘಶೀರ್ಷಿಕೆ ಮಂಶ್ರು ಪೀಠಿಕಾ ವಿಭಾಗವನ್ನು ಈ ವಿಧೇಯಕದಲ್ಲಿ ಸೇರಿಸಲಾಯಿತು)

SRI A. LAKSHMISAGAR.—Sir, I beg to move "That the Public Wakfs (Extention of Limitation) (Karnataka Amendment) Bill 1983 be passed'

ಉಪಾಧ್ಯಕ್ಷರು.—ಪ್ರಸ್ತಾವನೆ ಏನೆಂದರೆ,

"The Public Wakfs (Extension of Limitation) (Karnataka Amendment)Bill 1983 ನ್ನು ಅನುಮೋದಿಸುವುದು.

ಪ್ರಸ್ತಾವನೆ ಅಂಗೀಕರಿಸಲ್ಪಟ್ಟಿತು ಮತ್ತು ವಿಧೇಯಕಕ್ಕೆ ಅನುಮೋದನೆ ನೀಡಲಾಯಿತು.

ಕರ್ನಾಟಕ ರಾಜ್ಯ ಮಂತ್ರಿಗಳ ವೇತನ ಮತ್ತು ಭತ್ಯೆಗಳ(ತಿದ್ದುಪಡಿ) ಮಸೂದೆ, ೧೯೮೩.

ಪರ್ಯಾಲೋಚನಾ ಪ್ರಸ್ತಾವ.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) ದುಂಖ್ಯ ಮಂತ್ರಿಗಳವರ ಪರವಾಗಿ.–

"ಮಾನ್ಯ ಉಪಾಧ್ಯಕ್ಷರೇ, ಕರ್ನಾಟಕ ರಾಜ್ಯ ಮಂತ್ರಿಗಳ ವೇತನ ಮತ್ತು ಭತ್ಯಗಳ (ತಿದ್ದುಪಡಿ) ಮಸೂದೆ ೧೯೬೩ನ್ನು ಪರ್ಯಾಲೋಚಿಸಬೇಕೆಂದು ಸೂಚಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.––ಇದರಲ್ಲಿ ಎರಡು ವಿಷಯಗಳು ಅಡಕವಾಗಿವೆ. ಮೊದಲನೆಯದಾಗಿ ಹೆಲಿಕ್ಯಾಪ್ಟರ್‌ನ್ನು ಉಪಯೋಗಿಸತಕ್ಕಂಥ ವಿಷಯಕ್ಕೆ ಸಂಬಂಧಪಟ್ಟದ್ದು. ಈಗಿರುವ ರೀತಿಯಲ್ಲಿ ಮಾನ್ಯ ಮುಖ್ಯಮಂತ್ರಿಗಳವರು ಮಾತ್ರ ಇದನ್ನು ಉಪಯೋಗಿಸಬಹುದಾಗಿದೆ ಆದುದರಿಂದ ಇದನ್ನು ಮುಖ್ಯಮಂತ್ರಿಗಳು ಅಲ್ಲದೆ ಇತರೇ ಮಂತ್ರಿಗಳೂ ಉಪಯೋಗಿಸುವುದಕ್ಕೆ ಸಂಬಂಧಪಟ್ಟ ಹಾಗೆ ತಿದ್ದುಪಡಿಯನ್ನು ತರಲಾಗಿದೆ ಮತ್ತು ಅತ್ಯಂತ ತ್ವರಿತವಾಗಿ ಜರೂರಾಗಿ ಈ ಹೆಲಿಕ್ಯಾಪ್ಟರ್‌ನ್ನು ಬೇರೆ ಇನ್ನಿತರ ಸಂದರ್ಭಗಳಲ್ಲಿ ಉಪಯೋಗಿಸಬೇಕಾಗಿದೆ ಬಂದಂಥ ಸನ್ನಿವೇಶಗಳು ಉದಾಹರಣೆಗಳು ನಮ್ಮ ಮುಂದಿದೆ. ಮಳೆಗಾಲದಲ್ಲಿ ಯಾರಾದಾರೂ ಪ್ರಾಣ ರಕ್ಷಣೆ ಮಾಡಬೇಕಾಗಿ ಬಂದಂಥಾ ಸಂದರ್ಭದಲ್ಲಿ ಮತ್ತು ಯಾವುದಾದರೂ ರೋಗಿಯನ್ನು ತುರ್ತಾಗಿ ಬೆಂಗಳೂರಿಗೆ ಕರೆ ತರುವುದಕ್ಕೆ ಸಂಬಂಧಪಟ್ಟ ಹಾಗೆ ಇದನ್ನು ಉಪಯೋಗ ಮಾಡುವುದಕ್ಕೆ ಇದರಲ್ಲಿ ಸೇರಿಸುವುದಕ್ಕೆ ಪ್ರಯತ್ನ ಮಾಡಿದ್ದೇವೆ, ಆ ಮೇಲೆ ಎರಡನೆಯದಾಗಿ, ಮಂತ್ರಿಗಳವರು ಪ್ರವಾಸ ಮಾಡತಕ್ಕ ಸಮಯದಲ್ಲಿ ಅವರಿಗೆ ಕೊಟ್ಟಿರತಕ್ಕ ವಾಹನ ಕೆಟ್ಟು ಹೋದರೆ, ಅದನ್ನು ಉಪಯೋಗಿಸುವುದಕ್ಕೆ ಸಾಧ್ಯವಾಗದೇ ಇದ್ದರೆ ಅಂಥಾ ಸಂದರ್ಭದಲ್ಲಿ ಇತರರಿಂದ ಬೇರೆ ವಾಹನವನ್ನು ಬಾಡಿಗೆ ತೆಗೆದುಕೊಂಡು ಬರಲಿಕ್ಕೆ ಮತ್ತು ಅದರಿಂದ ತಗಲತಕ್ಕ ಪೆಟ್ರೋಲನ್ನು ಸರ್ಕಾರದಿಂದ ಪಡೆದುಕೊಳ್ಳುವುದಕ್ಕೆ ಅನುಕೂಲವಾಗುವಂತೆ ಇದರಲ್ಲಿ ಸೇರಿಸಿದ್ದೇವೆ. ಇವೆರೆಡೂ ಬಹಳ ಯೋಗ್ಯವಾದ ತಿದ್ದುಪಡಿಗಳು ಆಗಿವೆ ಆದುದರಿಂದ ಇದಕ್ಕೆ ಮಾನ್ಯ ಸದಸ್ಯರು ಅನುಮತಿಯನ್ನು ಕೊಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ.— (ವಿರೋಧ ಪಕ್ಷದ ನಾಯಕರು) ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಮಂತ್ರಿಗಳವರಿಗೂ ಅನುಕೂಲವಾಗತಕ್ಕ ರೀತಿಯಲ್ಲಿ ಏನು ತಿದ್ದುಪಡಿಯನ್ನು ತಂದಿದ್ದಾರೆ ಅದೇ ಅನುಕೂಲವನ್ನು ಸಾರ್ವಜನಿಕರಿಗೂ ಕೊಡತಕ್ಕದ್ದರ ಬಗ್ಗೆ ಮತ್ತು ಅವರ ಸಂರಕ್ಷತೆಯನ್ನು ನೋಡ ತಕ್ಕದರ ಬಗ್ಗೆ ಗಮನಹರಿಸಬೇಕಾಗಿದೆ. ಏತಕ್ಕೆಂದರೆ ಈಗ ೩ ಗಂಟೆಗಳ ಹಿಂದೆ ನಡೆದಂಥ ನಿದರ್ಶನವನ್ನು ತಮ್ಮ ಮುಂದಿಡುವುದಕ್ಕೆ ಇಷ್ಟಪಡುತ್ತೇನೆ. ಕಬ್ಬನ್ ಪಾರ್ಕ್ ಮುಂದಿರತಕ್ಕ ಹೋಟೆಲ್ ಟಿಫಾನ್ಸಿಸ್ ಹತ್ತಿರ ನಮ್ಮ ಪತ್ರಿಕಾ ಬಂಧುಗಳಾದ ಹಿಂದುಸ್ಥಾನ್ ಟೈಮ್ಸ್‌ನ ಸ್ಪೆಷಲ್ ಕರೆಸ್ಪಾಂಡೆಂಟ್ಸ್ ವಿ. ವಿ. ಭಾಸ್ಕರ್‌ರವರು ತಮ್ಮ ಕಾರನ್ನು ಅಲ್ಲಿಗೆ ತೆಗೆದುಕೊಂಡು ಹೋದಂಥ ಸಂದರ್ಭದಲ್ಲಿ, ಅಲ್ಲಿ ಸಾಕಷ್ಟು ಪೋಲೀಸ್ ಇತ್ತು, ವ್ಯಾನ್ ಇತ್ತು, ಅಸಿಸ್ಟೆಂಟ್ ಕಮಿಷನರ್ ಆಫ್ ಪೋಲೀಸ್‌ನವರು ಅಲ್ಲಿಯೇ ಇದ್ದರು. ಹೀಗಿದ್ದಾಗ್ಯೂ ಕೂಡ ಇವರು ಅಲ್ಲಿಗೆ ಕಾರನ್ನು ತೆಗೆದುಕೊಂಡು ಹೋದಾಗ ಕೆಲವರು ದೊಡ್ಡ ದೊಡ್ಡ ಕಲ್ಲುಗಳನ್ನು ತೆಗೆದುಕೊಂಡು ಇವರ ಕಾರಿಗೆ ಹೊಡೆದಿದ್ದಾರೆ, ಇದರಿಂದ ಕಾರಿನ ಗ್ಲಾಸ್ ಚೂರುಗಳು ತಲೆಯಲ್ಲಿ ಎಲ್ಲಾ ಸೇರಿಕೊಂಡು ಬಿಟ್ಟಿದೆ. ಇನ್ನೂ ಆಸ್ಪತ್ರೆಯಲ್ಲಿ ಗ್ಲಾಸ್‌ಚೂರು ಗಳನ್ನು ತೆಗೆಯುತ್ತಿದ್ದಾರೆ. ನಾನು ಇದರ ಬಗ್ಗೆ ಅಸಿಸ್ಟೆಂಟ್ ಕಮಿಷನರ್ ಆಫ್ ಪೋಲೀಸ್‌ರವರನ್ನು ವಿಚಾರಿಸಿದಾಗ ನಾನು ಏನು ಮಾಡಲಿ my hands are full ಎಂದು ಹೇಳಿದರು. ಅಧಿಕಾರದಲ್ಲಿ ರತಕ್ಕವರಿಗೆ ಅವರು ಏನು ಹೇಳುತ್ತಾರೆಂದರೆ, ಟೋಟಲ್ ಬಂದ್ ಆದರೂ ಕೂಡ ಎಲ್ಲಾ ಚೆನ್ನಾಗಿ ದೆಂದು ಹೇಳುತ್ತಾರೆ. ಆದರೆ ವಿಧಾನಸೌಧಕ್ಕೆ ಇದು ಇಷ್ಟು ಹತ್ತಿರವಿದ್ದರೂ ಸಹ ಅಲ್ಲಿ ಅಷ್ಟೊಂದು ಪೋಲೀಸ್, ಜೀಪ್ ಮತ್ತು ವ್ಯಾನ್ ಇದ್ದರೂ ಕೂಡ ಒಬ್ಬ ಪತ್ರಿಕಾ ಕರ್ತರು ಟೀ ಕುಡಿಯಲು ಹೊರಗಡೆ ಹೋದಾಗ ಈ ರೀತಿಯಾಗಿ ಹಲ್ಲೆ ಮಾಡಿದರೂ ಸಹ ಪೋಲೀಸ್‌ನವರು ಮೂಕ ಪ್ರೇಕ್ಷಕರ ಹಾಗೆ ನೋಡುತ್ತಿದ್ದರೆ, ನೀವು ಇನ್ನು ಎಷ್ಟರಮಟ್ಟಿನ ರಕ್ಷಣೆಯನ್ನು ಸಾರ್ವಜನಿಕರಿಗೆ ಕೊಡುತ್ತಿದ್ದೀರಿ ಎಂಬುದನ್ನು ಹೇಳಬೇಕಾಗಿದೆ.

೫ ಪಿ.ಎಂ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಇದು ಒಂದು ಗಂಭೀರವಾದಂಥ, ಪ್ರಮುಖವಾದಂಥ ವಿಚಾರ. ಒಬ್ಬ ಪತ್ರಿಕಾಕರ್ತನ ಮೇಲೆ ಪೋಲೀಸರ ಎದುರುಗಡೆಯೇ ಇಂತಹ ಒಂದು ಹಲ್ಲೆ ನಡೆದಿದೆ, ಕಲ್ಲನ್ನು ಹೊಡೆದು ಅವರಿಗೆ ಘಾಸಿ ಮಾಡಿರತಕ್ಕ ಒಂದು ವಿಚಾರವನ್ನು ಸರ್ಕಾರದ ಗಮನಕ್ಕೆ ತಂದಿದ್ದೇನೆ.

ಏಕೆಂದರೆ ಇವತ್ತು ನಾವು ನಮ್ಮ ಅನುಕೂಲತೆ ಮಾಡಿಕೊಳ್ಳತಕ್ಕ ಸಂದರ್ಭದಲ್ಲಿ ಸಾರ್ವಜನಿಕರ ಅನುಕೂಲತೆ ಇದೆ ಛಿದ್ರತೆ ಇದೆ ಎನ್ನುವುದನ್ನು ನೋಡಿಕೊಂಡು ನಮ್ಮ ಅನುಕೂಲತೆ ಮಾಡಿಕೊಳ್ಳಬೇಕಾಗಿದೆ. ಆದುದರಿಂದ ಈ ವಿಚಾರವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಏಕೆಂದರೆ ಅವರ ಹತ್ತಿರ ಮಾತನಾಡಿ, ಅವರ ಹತ್ತಿರ ವಿಚಾರ ತಿಳಿದೇ ನಾನು ಇಲ್ಲಿ ಹೇಳುತ್ತಾ ಇರತಕ್ಕಂಥಾದ್ದು. ಮಾನ್ಯ ರಾಜ್ಯಪಾಲರ ಭಾಷಣದ ಬಗ್ಗೆ ಚರ್ಚೆಮಾಡುವಾಗ ನಾನು ವಿವರವಾಗಿ ಹೇಳುತ್ತೇನೆ.

ಉಪಾಧ್ಯಕ್ಷರು.—ಹೆಲಿಕ್ಯಾಪ್ಟರ್ ಮತ್ತು ಕಾರಿನ ವಿಚಾರ ಹೇಳಿ.

ಶ್ರೀ ಎಂ. ವೀರಪ್ಪ ಮೊಯಿಲಿ —ಮಂತ್ರಿಗಳು ಯಾವುದೇ ಅನುಕೂಲತೆಯನ್ನು ಮಾಡಿಕೊಳ್ಳುವಾಗ ಸಾರ್ವಜನಿಕರ ಹಿತದೃಷ್ಟಿಯಿಂದ ನೋಡಿ ಮಾಡಿಕೊಳ್ಳಬೇಕಾಗಿದೆ.

ಶ್ರೀ ಪಿ. ರಾಮದೇವ್....ನನ್ನದು ಕ್ರಿಯಾಲೋಪವಿದೆ. ಈಗ ಮಾನ್ಯ ಮೊಯ್ಲಿಯವರಿಗೆ...

ಶ್ರೀ ಎಂ. ವೀರಪ್ಪ ಮೊಯ್ಲಿ —ಏನೂ ಮಾತನಾಡದೆ ಬಿಲ್ ಪಾಸ್ ಮಾಡಬೇಕಾದರೆ ಮಾಡಿ.

ಶ್ರೀ ಪಿ. ರಾಮದೇವ್.—ಈಗ ಬಿಲ್ಲಿನ ವಿಚಾರ ಬಿಟ್ಟು ಬೇರೆ ಏನೋ ಮಾತನಾಡುತ್ತಾ ಇದ್ದಾರೆ. ಮಾನ್ಯ ಮಂತ್ರಿಗಳು ಬಿಲ್ಲನ್ನು ಇಂಟರ್‌ಡ್ಯೂಸ್ ಮಾಡಿದ್ದಾರೆ. ಅದರ ಬಗ್ಗೆ ಚರ್ಚೆಮಾಡಿ, ಅದು ಬಿಟ್ಟು ಎಲ್ಲೋ ಹೊರಟು ಹೋದರಿ ನೀವು.

ಶ್ರೀ ಎಂ. ವೀರಪ್ಪ ಮೊಯ್ಲಿ,—ಟ್ರೆಜರಿ ಬೆಂಚ್‌ನಲ್ಲಿರತಕ್ಕವರು ಈ ರೀತಿ ಯಾಗಿಯೇ ಮಾತನಾಡಬೇಕು ಎಂದು ನಿರ್ದೇಶನ ಹಾಕಿದರೆ ಆಗುವುದಿಲ್ಲ. ನಿನ್ನೆ ಕೂಡ ನಾವು ಹೊರಗೆ ಇದ್ದಾಗ ಏನೇನು ಬೇಕೋ ಅದೆಲ್ಲಾ ಮಾತನಾಡಿಬಿಟ್ಟಿದ್ದಾರೆ. ಈ ಸದನದ ಎಲ್ಲಾ ಸದಸ್ಯರಿಗೆ ಸೇರಿದಂಥ ವೇದಿಕೆ ಎಂದು ತಿಳಿದುಕೊಳ್ಳಬೇಕಾಗುತ್ತದೆ. ಇದು ಮಂತ್ರಿಗಳ ಸ್ಕ್ಯಾಲರಿಗೆ ಸಂಬಂಧಪಟ್ಟಿದ್ದು.

ಶ್ರೀ ಬಿ.ಎಸ್. ಯಡಿಯೂರಪ್ಪ.—ಮಾನ್ಯ ಸದಸ್ಯರು ಸ್ವಲ್ಪ ತಾಳ್ಮೆ ತೆಗೆದುಕೊಳ್ಳಬೇಕು. ಅವರು ಎಲ್ಲಿಗೆ ಹೋದರೂ ಅಲ್ಲಿಗೇ ಬರುತ್ತಾರೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ನೀವು ಸಂಬಳ ತೆಗೆದುಕೊಳ್ಳುವಾಗ ಸಾರ್ವಜನಿಕರ ಹಣ ಎಂದು ತಿಳಿದುಕೊಂಡು ತೆಗೆದುಕೊಳ್ಳಬೇಕು.

ಶ್ರೀ ಎ. ಲಕ್ಷ್ಮೀಸಾಗರ್.—ಶ್ರೀಮಾನ್ ಮೊಯ್ಲಿಯವರಿಗೆ ಈ ವಿಷಯದಲ್ಲಿ ಜ್ಞಾನೋದಯ ಯಾವತ್ತು ಆಯಿತು ?

ಶ್ರೀ ಎಂ. ವೀರಪ್ಪ ಮೊಯ್ಲಿ.—ನಿಮಗೆ ಯಾವಾಗ ಜ್ಞಾನೋದಯ ಕಡಿಮೆಯಾಯಿತು ಆಗ ಆಯಿತು.

ಒಬ್ಬ ಸದಸ್ಯರು.—ಬೈರೇಗೌಡರಿಗೆ ಕೊಟ್ಟದ್ದು ಸಾರ್ವಜನಿಕರ ಹಣವೇ ?

ಇನ್ನೊಬ್ಬ ಸದಸ್ಯರು.—ರಿಸರ್ವ್ ಬ್ಯಾಂಕ್ ಹಣ.

ಶ್ರೀ ಎಂ. ವೀರಪ್ಪ ಮೊಯಿಲಿ —ಯಾವಾಗ ಮಾನ್ಯ ಸಚಿವರ ಜ್ಞಾನೋದಯದ ಲಹರಿ ನಿಂತು ಹೋಯಿತೋ ಆಗ ಪ್ರಾರಂಭವಾಯಿತು. ಹೆಲಿಕ್ಯಾಪ್ಟರ್ ವಿಚಾರ ಬಂದ ಕೂಡಲೇ ನಮ್ಮ ಬೊಮ್ಮಾಯಿಯವರು ಇಲ್ಲಿ ಇಲ್ಲ, ಮಾನ್ಯ ಲಕ್ಷ್ಮೀಸಾಗರ್‌ರವರು ಇದ್ದಾರೆ. ಅವರೆಲ್ಲಾ ಕುರ್ಚಿಮೇಲೆ ನಿಂತು ಹಾರಾಡುತ್ತಿದ್ದರು. ಅಷ್ಟು ಸೆನ್ಸಿಟೀವ್.

ಶ್ರೀ ಎ. ಲಕ್ಷ್ಮೀಸಾಗರ್.—ನಾವು ಯಾವಾಗಲೂ ಕುರ್ಚಿ ಮೇಲೆ ನಿಂತು ಎಕ್ಸ್‌ರ್‌ಸೈಸ್ ಮಾಡಿಲ್ಲ. ಅದು ನಿಮ್ಮ ಸಂಪ್ರದಾಯಕ್ಕೆ ಸಂಬಂಧಪಟ್ಟದ್ದು.

ಶ್ರೀ ಎಂ. ವೀರಪ್ಪ ಮೊಯ್ಲಿ.—ಇದು ಹೆಲಿಕ್ಯಾಪ್ಟರ್ ಮತ್ತು ಸ್ಕ್ಯಾಲರಿಗೆ ಸಂಬಂಧಪಟ್ಟ ವಿಚಾರ ಆಡಳಿತ ನಡೆಸ ತಕ್ಕ ಚುಕ್ಕಾಣಿ ಇವರು ಕೈಯಲ್ಲಿ ಇರುವಾಗ ಜವಾಬ್ದಾರಿಗಳು ಮತ್ತು ಕರ್ತವ್ಯಗಳು ಜೊತೆಯಲ್ಲೇ ಬರುತ್ತವೆ. ಹೆಲಿಕ್ಯಾಪ್ಟರ್ ಹಕ್ಕಿನ ಪ್ರಶ್ನೆ. ತಾವು ಅನುಭವಿಸಬೇಕಾದ ಹಕ್ಕಿನ ಪ್ರಶ್ನೆ. ಹಕ್ಕು ಮತ್ತು ಜವಾಬ್ದಾರಿ ಇವೆರಡೂ ಜೊತೆಯಲ್ಲಿ ಹೋದಾಗ ಮಾತ್ರ ಸರಿ ಬರುತ್ತದೆ. ಯಾವುದೇ ಒಂದು ಅಧಿಕಾರ ನಮ್ಮ ಕೈಯಲ್ಲಿದ್ದಾಗ ಆ ಅಧಿಕಾರವನ್ನು ದುರುಪಯೋಗ ಮಾಡತಕ್ಕಂಥ ಪ್ರವೃತ್ತಿ ಬಂದಾಗ ಈ ವಿಚಾರ ಬರುತ್ತದೆ. ನಿನ್ನೆ ಸನ್ಮಾನ್ಯ ಮುಖ್ಯ ಮಂತ್ರಿಗಳು ಹೇಳಿದರು. 'ನೀವೇ

ತಯಾರಿಸಿದ ಔಷಧಿ ರುಚಿ ನೋಡಬೇಕಾದೀತು' ಎಂದು ಎನ್.ಎಸ್.ಎ. ಬಗ್ಗೆ ಹೇಳಿದ್ದು ಎಲ್ಲಾ ಪತ್ರಿಕೆಗಳಲ್ಲೂ ಬಂದಿದೆ. ಅದನ್ನು ಸ್ಪಷ್ಟವಾಗಿ ಕಾಣಿಸಿದ್ದಾರೆ, ಈಗ ರಾಜಕುಮಾರ್ ಅಭಿಮಾನಿಗಳ ಸಂಘದವರು ಬೆಂಗಳೂರು ಬಂದ್‌ಗೆ ಕರೆ ಕೊಟ್ಟಿದ್ದಾರೆ. ಅದಕ್ಕೂ ನಮ್ಮ ಕಾಂಗ್ರೆಸ್ ಪಕ್ಷಕ್ಕೂ ಸಂಬಂಧವಿಲ್ಲ. ಹೀಗಿರುವಾಗ ಅವರು ರಾಜಕೀಯ ವಿರಹಿತರಾಗಿ ಅವರದೇ ಆದಂಥ ರೀತಿಯಲ್ಲಿ ಮಾಡುತ್ತಾ ಇದ್ದಾರೆ. As a party we may not agree in respect of many things which he wants to say.

ಶ್ರೀ ವಿ. ಲಕ್ಷ್ಮೀಸಾಗರ್.—ಮಾನ್ಯ ಉಪಾಧ್ಯಕ್ಷರೆ, ಸಭೆಯ ಮುಂದೆ ಇರತಕ್ಕ ತಿದ್ದುಪಡಿ ವಿಷಯದ ಬಗ್ಗೆ ನಿಂದರೆ, ಕಾರುಗಳನ್ನು ಉಪಯೋಗಿಸಿಕೊಳ್ಳತಕ್ಕಂಥಾದ್ದು ಮತ್ತು ಹೆಲಿಕ್ಯಾಪ್ಟರನ್ನು ಉಪಯೋಗ ಮಾಡತಕ್ಕಂಥದ್ದು. ನಿನ್ನೆ ದಿನ ಮಾನ್ಯ ಮುಖ್ಯ ಮಂತ್ರಿಗಳು ಮಾಡಿದ ಭಾಷಣದ ಬಗ್ಗೆ ಇಲ್ಲಿ ಉಲ್ಲೇಖ ಮಾಡುವುದಕ್ಕೆ ಬರುವುದಿಲ್ಲ Sir. What my hon'ble friend the Leader of the Opposition is saying is wholly irrelevant to the Bill under discussion. If extraneous matters are brought in I submit to you, Sir, they should not be allowed and only relevant matters must be brought in the discussion.

ಶ್ರೀ ಎಂ ವೀರಪ್ಪ ಮೊಯ್ಲಿ.—ಹೆಲಿಕ್ಯಾಪ್ಟರನ್ನು ಮುಖ್ಯ ಮಂತ್ರಿಗಳು ಉಪಯೋಗ ಮಾಡುವವರ ಜೊತೆಗೆ ಮಂತ್ರಿಗಳೂ ಉಪಯೋಗ ಮಾಡಬಹುದು ಎಂದು ಇದೆ.

ಶ್ರೀ ಎಂ.ರಘುಪತಿ.—ಮಾನ್ಯ ಮೊಯ್ಲಿಯವರಿಗೆ ನಾನು ಹೇಳುವುದೇನೆಂದರೆ, ಹೆಲಿಕ್ಯಾಪ್ಟರನ್ನು ರೇಸ್‌ಕೋರ್ಸ್‌ನಿಂದ ಹೆಚ್.ಎ.ಎಲ್. ಏರ್‌ಪೋರ್ಟ್‌ವರಗೆ ಹೋಗುವುದಕ್ಕೆ ಉಪಯೋಗಿಸಿ ಎಂದು ಆ ರೀತಿ ವಿಧೇಯಕ ತನ್ನಿ. ರಾಮನಗರಕ್ಕೆ ಹೋಗುವುದಕ್ಕೆ ಒಂದು ವಿಧೇಯಕ ತನ್ನಿ ಎಂದು ಹೇಳುತ್ತಾರೆಂದು ನಾನು ತಿಳಿದುಕೊಂಡಿದ್ದೆ. ಆ ರೀತಿ ಮಾಡದೇ ಹೋದರೆ ಸಂತೋಷ.

ಶ್ರೀ ಕೆ.ಹೆಚ್. ರಂಗನಾಥ್.—ರಾಮನಗರಕ್ಕೆ ಹೋಗುವುದಕ್ಕೆ ಇದರಲ್ಲಿದೆ. ಇಲ್ಲಿಯವರೆಗೆ ಇರಲಿಲ್ಲ, ಈಗ ತಂದಿರತಕ್ಕ ಅಮೆಂಡ್‌ಮೆಂಟ್‌ನಲ್ಲಿ ತಪ್ಪಾಗೂ, ರಾಜ್ಯ ಮಂತ್ರಿಗಳಿಗೂ ರಾಮನಗರಕ್ಕೆ ಹೋಗುವುದಕ್ಕೆ ಅವಕಾಶವಿದೆ

ಶ್ರೀ ಎಂ. ರಘುಪತಿ.—ರೇಸ್‌ಕೋರ್ಸ್‌ನಲ್ಲಿ ನಾವು ಹೆಲಿಪ್ಯಾಡ್ ಮಾಡುವುದಿಲ್ಲ.

ಶ್ರೀ ಎಂ.ಎಸ್.ಕೃಷ್ಣನ್.—ಮಾನ್ಯ ವಿರೋಧಪಕ್ಷದ ನಾಯಕರಾದ ಮೊಯ್ಲಿಯವರು ಹಲವಾರು ವಿಷಯಗಳನ್ನು ಪ್ರಾತನಾಡುತ್ತಾ ಇದ್ದಾರೆ. ಅವರು ಈ ರೀತಿ ಮಾತನಾಡುವುದನ್ನು ನೋಡಿದರೆ ಟಿ.ಪಿ. ಕೈಲ ಸಂರವರು ಹೇಳಿದ ಒಂದು ಮಾತು ನೆನಪಿಗೆ ಬರುತ್ತದೆ. ಅವರು ಬಾದರಾಯಣ ಸಂಬಂಧ ಎಂದು ಹೇಳಿದ್ದಾರೆ. ಹಾಗೆ ಮಾನ್ಯ ಮೊಯ್ಲಿಯವರು ಬಾದರಾಯಣ ಸಂಬಂಧ ಕಲ್ಪಿಸುವುದಕ್ಕೆ ಪ್ರಯತ್ನ ಪಟ್ಟಿದ್ದಾರೆ. ಏಕೆ ಇದು ?

ಶ್ರೀ ಎಂ. ವೀರಪ್ಪ ಮೊಯಿಲಿ.—ಮಂತ್ರಿಗಳಿಗೆ ಸಂಬಂಧಪಟ್ಟಂತೆ ನಾನು ಮಾತನಾಡುತ್ತಾ ಇದ್ದೇನೆ. ಹೆಲಿಕ್ಯಾಪ್ಟರ್ ಮತ್ತು ಕಾರು – ಇದು ಮುಖ್ಯ ಮಂತ್ರಿಗಳಿಗೆ ಮತ್ತು ಮಂತ್ರಿಗಳಿಗೆ ಸಂಬಂಧಪಟ್ಟಿದ್ದು.....

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ವಿರೋಧಪಕ್ಷದ ನಾಯಕರು ಒಂದು ನಿಮಿಷ ಅವಕಾಶ ಕೊಟ್ಟರೆ ಅವರ ತಿಳುವಳಿಕೆಗೆ ಇಷ್ಟನ್ನು ಹೇಳಬಯಸುತ್ತೇನೆ. ಹೆಲಿಕ್ಯಾಪ್ಟರ್ ಮತ್ತು ಕಾರು ಅಲ್ಲ. ಮಾನ್ಯ ಉಪಾಧ್ಯಕ್ಷರೇ, ಈ ಒಂದು ವರ್ಷದ ಅವಧಿಯಲ್ಲಿ ಳ ಸಲ ಹೆಲಿಕ್ಯಾಪ್ಟರ್ ಬಳಕೆಯಾಗಿದೆ. ಈ ಒಂದು ವರ್ಷದ ಅವಧಿಯಲ್ಲಿ ಸರ್ಕಾರದ ಮಂತ್ರಿಗಳ ಉಪಯೋಗಕ್ಕಾಗಿ ಅಥವಾ ಸೆಕ್ರೆಟರಿಗಳ ಉಪಯೋಗಕ್ಕಾಗಿ ಒಂದು ಹೊಸ ಕಾರನ್ನೂ ಕೊಂಡಿಲ್ಲ. ಕರ್ನಾಟಕ ಇತಿಹಾಸದಲ್ಲಿ ಒಂದು ಕಾರನ್ನೂ ಕೊಳ್ಳದೇ ಇರತಕ್ಕಂಥಾದ್ದು ಇದು ಹೊದಲನೆಯದು. ಹೆಲಿಕ್ಯಾಪ್ಟರ್ ಇಲ್ಲಿಯವರೆಗೆ ಏನಾಗಿತ್ತು ಅಂದರೆ ಮುಖ್ಯ ಮಂತ್ರಿಗಳ ಸ್ವತ್ತಾಗಿತ್ತು. ಇಲ್ಲಿಂದ ಏನೇಕಲ್‌ಗೆ ಹೋಗಬೇಕಾದರೆ ಹೆಲಿಕ್ಯಾಪ್ಟರ್‌ನಲ್ಲಿ ಹೋಗಬೇಕಾಗಿತ್ತು. ಈಗ ಈ ತಿದ್ದುಪಡಿ ಏನೆಂದರೆ. ಅತಿ ಅಗತ್ಯವಾದ ಪರಿಸ್ಥಿತಿ ಇದ್ದಲ್ಲಿ ಯಾವುದೇ ಒಬ್ಬ ಮಂತ್ರಿ ಕೂಡ ಅದನ್ನು ಉಪಯೋಗಿಸಿಕೊಳ್ಳಬಹುದು ಎಂದು ಹೇಳತಕ್ಕಂಥಾದ್ದು.

ಈ ತಿದ್ದುಪಡಿ ಅಷ್ಟೆ. ಅದು ಮುಖ್ಯಮಂತ್ರಿಗಳೊಬ್ಬರಿಗೇ ಸೇರತಕ್ಕ ಪ್ರಿವಿಲೇಜ್ ಆಗಕೂಡದು. ನೀವು ಮಂತ್ರಿಗಳಾಗಿದ್ದಿರಲ್ಲ, ಆಗ ನೀವೇನಾದರೂ ಉಪಯೋಗಿಸುತ್ತಿದ್ದಿರಾ ? ನಿಮಗೆ ಎಲ್ಲಾದರೂ ಅವಕಾಶ ಸಿಕ್ಕಿತ್ತೆ. ಇವತ್ತು ನಮ್ಮ ಎಲ್ಲಾ ಕೊಲಿಗ್ಸ್‌ಗೂ ಅನುಕೂಲವಾಗಲಿ ಎಂದು ತಂದಿದ್ದೇವೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಬರೀ ಮುಖ್ಯ ಮಂತ್ರಿಗಳು ಉಪಯೋಗ ಮಾಡುವುದಲ್ಲ. ಎಲ್ಲರೂ ಕೂಡ ಸಮವಾಗಿ ಉಪಯೋಗ ಮಾಡಿದರೆ ಆಗ.....

ಶ್ರೀ ವೈ. ರಾಮಕೃಷ್ಣ.—ಇಲ್ಲಿಂದ ಆನೇಕಲ್ಲಿಗೆ ಎಂಬುದಾಗಿ ಸದನಕ್ಕೆ ತಪ್ಪು ಮಾಹಿತಿಯನ್ನು ನೀಡುತ್ತಿದ್ದೀರಿ. ಯಾರೋ ಇಲ್ಲಿಂದ ಆನೇಕಲ್ಲಿಗೆ ಹೋಗಿದ್ದಾರೆಂಬ ಪ್ರಶ್ನೆ ಬರಬಹುದು. ಆನೇಕಲ್ಲಿಗೆ ಬಂದದ್ದು ಹೊರಗಿನಿಂದ.

ಶ್ರೀ ರಾಮಕೃಷ್ಣ ಹೆಗಡೆ.—ಬೆಂಗಳೂರಿನಿಂದ ಮಂಗಳೂರಿಗೆ ಹೆಲಿಕ್ಯಾಪ್ಟರ್ ಹೋಯಿತ್ತಲ್ಲಾ ಅದರಲ್ಲಿ ಯಾರನ್ನು ಕರೆದುಕೊಂಡು ಹೋದರು ಎಂಬುದು ತಮಗೆ ನೆನಪು ಇದೆಯಾ ? ನಾನು ಹೆಗ್ಗಳಿಕೆಗೆಂದು ಹೇಳಿಕೊಳ್ಳುವುದಿಲ್ಲ. ನಿನ್ನೆ ಸಂಜೆ ಇಲ್ಲದ್ದೆ, ರಾತ್ರಿಯೆಲ್ಲಾ ಅಂಬಾಸಿಡರ್ ಕಾರಿನಲ್ಲಿ ಪ್ರಯಾಣ ಮಾಡಿ ಉಡುಪಿ ಮುಟ್ಟುವುದಕ್ಕೆ ಬೆಳಗಿನ ಜಾವ ೪ ಗಂಟೆಯಾಗಿತ್ತು. ಅನಂತರ ಅಲ್ಲಿಂದ ಇವತ್ತು ಬೆಳಿಗ್ಗೆ ಮಾಮಸ್ಸು ಬಂದಿದ್ದೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಯಾವ ರೀತಿ ದುರುಪಯೋಗ ಮಾಡಿದ್ದೀರಿ ಎಂಬುದರ ಬಗ್ಗೆ ನಾವು ನಂತರ ಹೇಳುತ್ತೇವೆ. ಆದಕ್ಕೆ ಸಂದರ್ಭ ಬರಲಿ. ಇದು ಇಲ್ಲಗೆ ಸೀಮಿತವಾಗಿಲ್ಲ. ಇವತ್ತಿನ ಮಟ್ಟಿಗೆ ಅದು ಬೇಡ. ಅದರ ಕತೆಯನ್ನು ಹೊರಗೆ ತರುತ್ತೇವೆ. ಏಕೆಂದರೆ, ಇಷ್ಟನ್ನೇ ಹೇಳಿದ್ದಕ್ಕೆ ನಿಮ್ಮವರು ಗಲಾಟೆ ಮಾಡುತ್ತಿದ್ದಾರೆ. ಒಂದು ವೇಳೆ ಆಡಳಿತ ಯಂತ್ರವನ್ನು ಯಾವ ರೀತಿ ದುರುಪಯೋಗ ಮಾಡುತ್ತಿದ್ದೀರೆಂಬ ಪಟ್ಟಿ ಪಟ್ಟಿಯನ್ನು ಹೊರಗೆ ತೆಗೆದರೆ ಎಲ್ಲಾ ನಿಂತುಕೊಂಡು ಬಿಡುತ್ತಾರೆ.

ಶ್ರೀ ಎಂ. ರಘಪತಿ.—ಅದರ ಪಟ್ಟಿಯನ್ನು ಸ್ವಲ್ಪ ನಮಗೂ ಕೊಡಿ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಸ್ವಲ್ಪ ಸಮಾಧಾನವಾಗಿರಿ. ಆದಕ್ಕೆ ಸಂದರ್ಭ ಬರುತ್ತದೆ. ಇಷ್ಟು ಮಾತ್ರ ಹೇಳುವುದಕ್ಕೆ ಬಯಸುತ್ತೇನೆ, ಇವತ್ತು ಇಲ್ಲದೇ ಇರತಕ್ಕ ವಿಚಾರವನ್ನು ಹೇಳುವುದರಿಂದ ನಿಮಗೆ ಯಾವ ರೀತಿಯ ಉಪಯೋಗವೂ ಇಲ್ಲ. ಇವತ್ತಿನ ದಿವಸದ ಬೆಂಗಳೂರು ಬಂದಿಗೂ ಕಾಂಗ್ರೆಸ್ ಪಕ್ಷಕ್ಕೂ ಯಾವುದೇ ಸಂಬಂಧವಿಲ್ಲ. ಆದರೂ ಕೂಡ ಕಾಂಗ್ರೆಸ್ ಪಕ್ಷದವರು ಎಸ್.ಎಸ್.ಎ. ಮುಖಾಂತರ ಕಾಂಗ್ರೆಸ್ ಪಕ್ಷದವರೂ ಬಂದ್‌ನ ಸಂದರ್ಭವನ್ನು ದುರುಪಯೋಗ ಮಾಡುತ್ತಿದ್ದಾರೆಂದು ಮುಖ್ಯ ಮಂತ್ರಿಗಳು ಹೇಳಿದ್ದಾರೆ. ಅದನ್ನು ನಾವು ಪ್ರತಿಭಟನೆ ಮಾಡಬೇಕಾಗಿದೆ.

SRI M. RAGHUPATHI.—Let him prove it.

SRI DEPUTY SPEAKER.—It is not relevant.

SRI M. VEERAPPA MOILY.—It is most relevant. How can he misuse his power ? If he wants to politically misuse the powers under NSA against the political opponent, we have got to oppose it and we have got to resist it.

ಶ್ರೀ ರಾಪಂಚೆಂದ್ರ ರಾವ್ ಪಿ. (ಉಲ್ಲಾಳ್) —ಈಗತಾನೆ ಮಾನ್ಯ ಮುಖ್ಯ ಮಂತ್ರಿಗಳು ಈ ಬಿಲ್ಲಿನ ವಿಷಯದಲ್ಲಿ ಒಂದು ಅಭಿಪ್ರಾಯವನ್ನು ಕೊಟ್ಟರು, ಅತ್ಯಂತ ಅವಶ್ಯಕತೆ ಇದ್ದಂತಹ ಸಂದರ್ಭದಲ್ಲಿ ಮಾತ್ರ ಹೆಲಿಕ್ಯಾಪ್ಟರ್‌ನ್ನು ಉಪಯೋಗ ಮಾಡುತ್ತೇವೆಂದು ಹೇಳಿದ್ದಾರೆ. ಆದರೆ ಇಲ್ಲಿ ಸೆಕ್ಷನ್ ೯ (೮) ನಲ್ಲಿ ಆ ಪದ ಪುಂಜ ಇಲ್ಲ. ಅದನ್ನು ಸೇರಿಸಬೇಕು. ಈಗ ಇರುವ ಪ್ರಕಾರ ಅದು ಈ ರೀತಿಯಾಗಿದೆ :—

"Use of Helicopter and Aircraft by Minister...2 It reads: "Every Minister shall, subject to availability, be entitled to use the helicopter or aircraft owned by the State Government for official

purpose, free of charge. ಯಾವ ಸಂದರ್ಭದಲ್ಲಾದರೂ ಉಪಯೋಗ ಮಾಡಬಹುದೆಂಬ ಅರ್ಥ ಆದರಲ್ಲಿ ಬರುತ್ತದೆ. ಅವರ ಉದ್ದೇಶ ಆ ರೀತಿ ಇರಬಹುದು. ಆದರೆ ಈಗ ಮಾನ್ಯ ಮುಖ್ಯ ಮಂತ್ರಿಗಳು ಏನು ಹೇಳಿದ್ದಾರೆ. ಆ ಪದ ಪುಂಜ ಇಲ್ಲಿ ಇಲ್ಲ. ಅದು ಬರಬೇಕ್ಕಾಗಿತ್ತು ಅದು ಬರದಿದ್ದರೆ ಇದನ್ನು ದುರು ಪಯೋಗ ಮಾಡಬಹುದು ಹಿಂದಿನ ಸರ್ಕಾರದವರು ಹೆಲಿಕ್ಯಾಪ್ಟರ್‌ನ್ನು ದುರುಪಯೋಗ ಮಾಡಿದರು. ಎಂಬುದಾಗಿ ಹೇಳುತ್ತಿದ್ದವರು, ಈಗ ಎಲ್ಲರಿಗೂ ಅದರ ಅನುಕೂಲವನ್ನು ಮುಂದು ವರಿಸಿರುವುದರಿಂದ, ಹೆಲಿಕ್ಯಾಪ್ಟರ್‌ನಲ್ಲಿ ಹೋಗಿ ಬರಬೇಕೆಂಬ ಗೀಳು ಇದ್ದವರು ಅದರಲ್ಲಿ ಹೋಗಿ ಬರಬಹುದು ಎಂಬ ಅಭಿಪ್ರಾಯ ಬರುತ್ತದೆ. ಆದ್ದರಿಂದ ಮಾನ್ಯ ಮುಖ್ಯ ಮಂತ್ರಿಗಳು ಹೇಳಿದಂತಹ ಪದ ಪುಂಜವನ್ನು ಇಲ್ಲಿ ಸೇರಿಸಬೇಕು.

ಶ್ರೀ ಕೆ. ಎಚ್. ರಂಗನಾಥ್.—ಏಕೆ ಅದನ್ನು ಬಿಟ್ಟಿದ್ದಾರೆಂದರೆ, ಹೇಳುವುದು ಒಂದು ಮಾಡುವುದು ಮತ್ತೊಂದು ಎಂಬುದನ್ನು ತೋರಿಸಂವುದಕ್ಕೋಸ್ಕರ ಅದನ್ನು ಬಿಟ್ಟಿದ್ದಾರೆ.

ಶ್ರೀ ವೈ. ರಾಮಕೃಷ್ಣ.—ಸಬ್‌ಕ್ಲಾಸ್ (೪)ರಲ್ಲಿ ಹೊಸ ಕ್ಲಾಸ್‌ನ್ನು ಸೇರಿಸಿದ್ದೀರಿ.

"If a motor car provided to him by the State Government goes out of order while on tour by road and a motor car is hired by him for journeys connected with his official business. the Minister Minister of State or the Deputy Minister shall be entitled to recover the actual hire charges paid by him."

ಇದರ ಅವಶ್ಯಕತೆ ಇತ್ತೇ? ಈಗಾಗಲೇ ಶೆಡ್ಯೂಲ್ ರೇಟ್ಸ್ ಇದೆ. ಮಿನಿಸ್ಟರ್ ಸ್ಯಾಲರೀಸ್ ಆಕ್ಟ್‌ನಲ್ಲಿ ಮೈಲೇಜ್ ಎಷ್ಟು ಕೊಡಬೇಕು ಅಂತ ಇದೆ. ಕಾರು ಔಟ್ ಆಫ್ ಆರ್ಡರ್ ಆದಾಗ ಬಾಡಿಗೆ ಕಾರನ್ನು ಗೊತ್ತು ಮಾಡಿಕೊಂಡು ಬರಬಹುದು. ಒಂದು ವೇಳೆ ೨೦೦ ಮೈಲಿ ದೂರದಲ್ಲಿ ಕಾರು ಔಟ್ ಆಫ್ ಆರ್ಡರ್ ಆದರೆ, ಮೈಲೇಜ್ ಕೊಟ್ಟರೆ ಅವರಿಗೆ ೨೦೦ ರೂಪಾಯಿಗಳು. ಸಿಕ್ಕುತ್ತಿತ್ತು. ಆದರೆ ಇದ ರಿಂದ ಸಾವಿರ ರೂಪಾಯಿ ಆಕ್ಚುಯಲ್ ಅಂತ ಹೇಳಿದರೂ ಕೂಡ ಅದರ ಪ್ರಕಾರ ನೀವು ಕೊಡ ಬೇಕಾಗುತ್ತದೆ. When schedule of rates are there, why this provision is necessary ? Don't you think it is loss to the Government and also redundant. ಇದನ್ನು ತಾವು ಆಲೋಚಿಸಿ ಮಾಡಿ.

ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).—ಈ ಮಸೂದೆಯಲ್ಲಿ ಅಡಗಿರುವುದು ಎರಡು ಅಂಶಗಳು. ಒಂದು ಹೆಲಿಕ್ಯಾಪ್ಟರ್ ಇನ್ನೊಂದು ಕಾರು. ಮೊದಲನೆಯ ಪ್ರಶ್ನೆ ಹೆಲಿಕ್ಯಾಪ್ಟರ್‌ನ್ನು ಉಪಯೋಗ ಮಾಡಬೇಕಾದ ಪ್ರಮೇಯ ಇದೆಯೇ ಎಂಬುದು. ಏಕೆಂದರೆ ಅಲ್ಲಿ ಮಾತನಾಡುವುದಕ್ಕೆ ಹೋದರೆ, ಹಿಂದಿನ ಸರ್ಕಾರದ ಮುಖ್ಯ ಮಂತ್ರಿಗಳಾಗಿದ್ದಂತಹ ಶ್ರೀಮಾನ್ ಗುಂಡೂರಾವ್‌ರವರು ಇಲ್ಲಿಂದ ರಾಮನಗರಕ್ಕೆ ಅಥವಾ ಎಲ್ಲೇ ಹೋಗಲಿ ಹೆಲಿಕ್ಯಾಪ್ಟರ್‌ನಲ್ಲಿ ಹೋಗಂತ್ತಿದ್ದರು. ಆ ರೀತಿ ಕಾವು ಮಾಡುವುದಿಲ್ಲ. ನಾವು ಬಹಳ ಕಡಿಮೆ ಉಪಯೋಗ ಮಾಡುತ್ತಿದ್ದೇವೆಂದು ಕಾವು ಹೇಳಂತ್ತಿದ್ದೀರಿ ಮತ್ತೊಂದು ಇದನ್ನು ಮುಖ್ಯ ಮಂತ್ರಿಗಳಿಗಷ್ಟರು ಮಾತ್ರ ಉಪಯೋಗ ಮಾಡುವಂಥಾದ್ದು ಇತ್ತು. ಅದನ್ನು ಮಂತ್ರಿಗಳೂ ಹಾಗೂ ರಾಜ್ಯಮಂತ್ರಿಗಳೂ ಕೂಡ ಉಪಯೋಗ ಮಾಡಬಹುದೆಂದು ಹೇಳಿ ಸಮಾಜವಾದದ ಅನುಕೂಲ ಕೊಟ್ಟಿದ್ದೇವೆ ಎನ್ನುವ ರೀತಿಯಲ್ಲಿ ಮಾತನಾಡಿದ್ದಾರೆ. ಸನಗಾದರೂ ಅನ್ನಿಸುವುದೇನೆಂದರೆ, ಮಂತ್ರಿಗಳಿಗೂ ಇದರ ಅನುಕೂಲ ಕಲ್ಪಿಸಿಕೊಡುವುದರಲ್ಲಿ ಸಮಾಜವಾದ ವಾಗುವುದಿಲ್ಲ. ಮಂತ್ರಿಗಳಿಗೂ ಹೆಲಿಕ್ಯಾಪ್ಟರ್‌ನ್ನು ಉಪಯೋಗ ಮಾಡುವಂತಹ ಅವಕಾಶವನ್ನು ಕಲ್ಪಿಸಿಕೊಟ್ಟಿದ್ದೇವೆಂದು ಹೇಳುವುದಾದರೆ, ಈ ರಾಜ್ಯದ ಜನ ನಿಮ್ಮನ್ನು ನೋಡಿ ನಗುತ್ತಾರೆಂದು ಸನಗನ್ನಿಸುತ್ತಿದೆ. ಮೊದಲನೆಯದಾಗಿ ನಮಗೆ ಹೆಲಿಕ್ಯಾಪ್ಟರ್ ಬೇಕೆ ? ಎಂಬುದೇ ನನ್ನ ಪ್ರಶ್ನೆ. ಹೆಲಿಕ್ಯಾಪ್ಟರ್ ಬೇಕಾಗಿಲ್ಲವೆಂಬುದು ನನ್ನ ಸ್ಪಷ್ಟವಾದ ಅಭಿಪ್ರಾಯ. ಆದ್ದರಿಂದ ಈ ಮಸೂದೆ ವಿಷಕ್ಕೆ ಬರಬೇಕೆಂಬುದು ನನಗಂತೂ ಅರ್ಥವಾಗುವುದಿಲ್ಲ. ಮೂಲಭೂತವಾಗಿ ನಾನು ಇದಕ್ಕೆ ವಿರೋಧ ವಾಗಿದ್ದೇನೆ. ಎರಡನೆಯದಾಗಿ ಮುಖ್ಯ ಮಂತ್ರಿಗಳು ನನ್ನ ಉಡುಪಿಗೆ ಕಾರಿನಲ್ಲಿ ಹೋಗಿ ಬಂದೆ ಎಂಬುದಾಗಿ ಹೇಳಿದರು, ಆದರೆ ಎಲ್ಲರೂ ಆ ರೀತಿ ಮಾಡುತ್ತಾರೆಂದು ಹೇಳುವುದಕ್ಕಾಗುವುದಿಲ್ಲ.

ಈಗಿನ ಸನ್ನಿವೇಶದಲ್ಲಿ, ಈಗಿನ ಆರ್ಥಿಕ ಪರಿಸ್ಥಿತಿಯಲ್ಲಿ ದೇಶದಲ್ಲಿ ಆರ್ಥಿಕ ಪರಿಸ್ಥಿತಿ ಇರುವುದನ್ನು ನೋಡಿದರೆ, ರಾಜ್ಯದಲ್ಲಿ ಇದರ ಬಗ್ಗೆ ಒಂದು ಹೊಸ ತಿರುವನ್ನು ಕೊಡಬೇಕು. ಆದ್ದರಿಂದ ಇದು ಅಷ್ಟೊಂದು ಸಮಂಜಸವಾಗಿ ಕಾಣುವುದಿಲ್ಲವೆಂಬುದು ನನ್ನ ಅಭಿಪ್ರಾಯ. ಮತ್ತೆ ಕಾರನ್ನು ಉಪಯೋಗ ಮಾಡುವುದರಲ್ಲಿ ಹೇಳುವುದಾದರೆ, ಮಾನ್ಯ ರಾಮಕೃಷ್ಣರವರು ಹೇಳಿದಂತಹ ಸಲಹೆ ಸಮಂಜಸವಾದುದಲ್ಲ. ಹೀಗೂ ಆಗಬಹುದು, ಹಾಗೂ ಆಗಬಹುದು. ಮಂತ್ರಿಗಳ ಕಾರು ಕೆಟ್ಟು ಹೋದರೆ, ಯಾವುದೋ ಬೇರೆ ಕಾರನ್ನು ಬಾಡಿಗೆಗೆ ಗೊತ್ತು ಮಾಡಿಕೊಂಡು ಬಂದರೆ, ಆಕ್ಟ್ಯುಯಲ್ ಕೊಡಿ ಅಂತ ಹೇಳಿದರೆ ಜಾಸ್ತಿಯಾಗುತ್ತದೆಂಬುದು ಅವರ ಅಭಿಪ್ರಾಯ. ಈವಾಗ ಏನಾಗಿದೆ ಎಂದರೆ ಒಂದು ರೇಟನ್ನು ನಿಗದಿ ಮಾಡಿದ್ದಾರೆ. ಬೆಂಗಳೂರಿನಿಂದ ಮಂಗಳೂರಿಗೆ ಟ್ರೈನಿನಲ್ಲಿ ಹೋಗಬೇಕಾದರೂ ಒಂದಕ್ಕೆ ಒಂದೂವರೆಯಷ್ಟು ಜಾಸ್ತಿ ಕೊಡುತ್ತಾರೆ. ಖರ್ಚು ಮಾಡಿದ್ದಕ್ಕಿಂತ ಖರ್ಚು ಮಾಡಿದ್ದಕ್ಕಿಂತ ಜಾಸ್ತಿ ಇವತ್ತು ಕೊಡುತ್ತಿದ್ದಾರೆ. ಆದ್ದರಿಂದ ಈ ರೀತಿಯ ತಿದ್ದುಪಡಿ ಇಲ್ಲದೆ ಹೋದರೆ ಜಾಸ್ತಿ ಕೊಡಬೇಕಾಗಿ ಬರುತ್ತದೆ. ಆದ್ದರಿಂದ ಈ ತಿದ್ದುಪಡಿ ಸಮಂಜಸ. ಇದರಲ್ಲಿ ಭಿನ್ನಾಭಿಪ್ರಾಯವಿಲ್ಲವೆಂದು ಮಾತ್ರ ಹೇಳಬೇಕಾಗಿದೆ.

ಡಾ॥ ವಿ. ಎಸ್. ಆಚಾರ್ಯ (ಉಡುಪಿ) —ಮಾನ್ಯ ಅಧ್ಯಕ್ಷರೆ, ಈಗಾಗಲೇ ಮಿತ್ರರು ಮಾತನಾಡಿದ ಹಾಗೆ ಇದರಲ್ಲಿ ಎರಡು ವಿಷಯಗಳಿವೆ. ಅವೇ ಸಚಿವರು ಕಾರು ಮತ್ತು ಹೆಲಿಕ್ಯಾಪ್ಟರನ್ನು ಉಪಯೋಗ ಮಾಡುವ ವಿಷಯಗಳು. ಕಾರಿನ ಉಪಯೋಗದ ಬಗ್ಗೆ ಹೆಚ್ಚಿಗೆ ಹೇಳಬೇಕಾಗಿಲ್ಲ. ಮಂತ್ರಿಗಳ ಕಾರು ಪ್ರವಾಸ ಹೋದಾಗ ಕೆಟ್ಟರೆ ಅವರು ಬೇರೆ ಕಾರನ್ನು ಮಾಡಿಕೊಂಡು ಬರಲು ತಗಲುವ ವಾಸ್ತವ ಖರ್ಚನ್ನು ಕೊಡುವುದರಲ್ಲೇನು ತಪ್ಪಿಲ್ಲ. ಹೆಲಿಕ್ಯಾಪ್ಟರನ್ನು ಉಪಯೋಗಿಸಲು ಸಚಿವರು ಮತ್ತು ಉಪಸಚಿವರೆಲ್ಲರಿಗೂ ಕೊಡಬೇಕೆಂದು ಮಾಡಿರುವ ಉದ್ದೇಶ ಗೊತ್ತಾಗುವುದಿಲ್ಲ. ಏಕೆಂದರೆ ಈಗಾಗಲೇ ಮುಖ್ಯ ಮಂತ್ರಿಗಳು ಹೇಳಿದರು, ಇಡೀ ವರ್ಷದಲ್ಲಿ ೪ ಬಾರಿ ಅತೀ ಅಗತ್ಯಬಿದ್ದ ಸಂದರ್ಭದಲ್ಲಿ ಸರ್ಕಾರೀ ಕೆಲಸಕ್ಕೆ ಹೆಲಿಕ್ಯಾಪ್ಟರ್ ಉಪಯೋಗವಾಗಿದೆ ಎಂದು. ಅವರು ಮೊನ್ನೆ ಪ್ರವಾಸ ಹೋದಾಗ ರಾತ್ರಿ ಹೊರಟು ಬೆಳಿಗ್ಗೆ ಬರಬೇಕಾದರೆ ಅವರಿಗೆ ಇದರ ಅವಶ್ಯಕತೆ ಬರಲಿಲ್ಲ. ಅನೇಕ ಸಂದರ್ಭಗಳಲ್ಲಿ ನಾನು ಕೇಳಿದ ಹಾಗೆ ಕಾನೂನು, ಕನ್‌ವೆನ್‌ಷನ್, ಪ್ರೆಸಿಡೆಂಟ್ ಎಲ್ಲ ರೆಫರ್ ಮಾಡಿದ್ದೀರಿ. ಹಿಂದೆ ಹೆಲಿಕ್ಯಾಪ್ಟರ್ ಯಾವ ರೀತಿ ಉಪಯೋಗವಾಗುತ್ತಿತ್ತು ಎಂಬುದು ಇಡೀ ಕರ್ನಾಟಕ ರಾಜ್ಯದ ಜನತೆಗೆ ಗೊತ್ತಿದೆ. ಈಗ ಮಂತ್ರಿಗಳಿಗೆ ಮತ್ತು ಉಪ ಮಂತ್ರಿಗಳಿಗೆ ಹೆಲಿಕ್ಯಾಪ್ಟರಿನ ಉಪಯೋಗ ದೊರೆಯಲಿ ಎಂದು ಮಾಡಿದರೆ ಅದು ಮುಂದಕ್ಕೂ ಮುಂದುವರಿಯುತ್ತದೆ. ಪ್ರಜಾಪ್ರಭುತ್ವದಲ್ಲಿ ಇಂದಿನಿಂದ ಕೊನೆಯವರೆಗೆ ನೀವೇ ಮಂತ್ರಿಗಳಾಗಿರುವುದಿಲ್ಲ. ಮುಂದೆ ಬಂದವರು ಇದು ನೀವು ಕೊಟ್ಟು ಲೈಸೆನ್ಸ್ ಎಂದು ದುರುಪಯೋಗ ಮಾಡಿಕೊಂಡರೆ ಏನು ಮಾಡುತ್ತೀರಿ ? ಆದ್ದರಿಂದ ಹೆಲಿಕ್ಯಾಪ್ಟರಿನ ಅಗತ್ಯ ಅಷ್ಟಾಗಿ ಇಲ್ಲದಿರುವಾಗ ಏಕೆ ಈ ಲೈಸೆನ್ಸ್ ಅನ್ನು ಕೊಡುತ್ತೀರಿ ? ನಿಜವಾಗಿ ಈ ಕಡೆಯವರು ಅದನ್ನು ಸ್ವಾಗತ ಮಾಡಬೇಕಾಗಿತ್ತು, ಆದರೆ ಅವರು ಸ್ವಾಗತ ಮಾಡಲಿಲ್ಲ.

ಶ್ರೀ ಜೆ. ಪಿ. ಒಡೆಯರಾಜ್.—ನಮಗೆ ಆದ ಗತಿ ಅವರಿಗೆ ಆಗುತ್ತದೆಂಬುದು ಗೊತ್ತಾದಕೆ ಸಾಕು.

ಡಾ॥ ವಿ. ಎಸ್. ಆಚಾರ್ಯ.—ಆ ದೃಷ್ಟಿಯಿಂದ ನಾನು ಹೇಳುವುದೇನೆಂದರೆ, ಇದರ ಬಗ್ಗೆ ನಮ್ಮ ರಾಮಚಂದ್ರರಾಯರು ಹೇಳಿದ ಹಾಗೆ ಅಗತ್ಯ ಬಿದ್ದ ಸಂದರ್ಭದಲ್ಲಿ ಸರ್ಕಾರೀ ಕಾರ್ಯ ನಿಮಿತ್ತ, ಹೆಲಿಕ್ಯಾಪ್ಟರನ್ನು ಉಪಯೋಗಿಸಲಾಗುವುದು ಎಂದು ಬರೆದರೆ ಸಾಕು. ಆಗ ಬೇಕಾದರೆ ಮಂತ್ರಿಗಳೂ ಹೋಗಬಹುದು, ಕಾರ್ಯದರ್ಶಿಗಳೂ ಹೋಗಬಹುದು ಮತ್ತು ಅಧಿಕಾರಿಗಳೂ ಹೋಗಬಹುದು. ಅತೀ ಅಗತ್ಯ ಸಂದರ್ಭದಲ್ಲಿ ಈ ಸಾಧನ ಬೇಕು. ಅತಿ ತುರ್ತು ಸಂದರ್ಭದಲ್ಲಿ ಅಂದರೆ ನ್ಯಾಚುರಲ್ ಕೆಲಾಮಿಟೀಸ್ ಮತ್ತೊಂದು ಸಂದರ್ಭದಲ್ಲಿ ಯಾರು ಹೋಗಬೇಕೆಂದು ಯೋಚನೆ ಮಾಡಿ ವ್ಯವಸ್ಥೆ ಮಾಡುವುದು ಸೂಕ್ತ. ನಾಳೆ ದಿವಸ ಯಾರಾದರೂ ಇದನ್ನು ದುರುಪಯೋಗ ಮಾಡಬಹುದೆಂಬ ಪ್ರಶ್ನೆಯನ್ನು ಎತ್ತಲಿಲ್ಲವೆಂದು ಯಾರೂ ಹೇಳಬಾರದು ಮತ್ತು ಕರ್ತವ್ಯ ಲೋಪ ಆಗದಾರದೆಂಬ ದೃಷ್ಟಿಯಿಂದ ಎತ್ತಿದ್ದೇನೆ. ಇಲ್ಲದಿದ್ದರೆ ಇದೇನು ದೊಡ್ಡ ಪ್ರಶ್ನೆ ಅಲ್ಲ. ಸರ್ಕಾರದ ಮನಸ್ಸಿನಲ್ಲಿ ಏನಿದೆ ಎಂಬುದನ್ನು ಮುಖ್ಯ ಮಂತ್ರಿಗಳು ವಿಷದಪಡಿಸಿದ್ದಾರೆ, ಮತ್ತು ಹೆಲಿಕ್ಯಾಪ್ಟರನ್ನು ಅನಾವಶ್ಯಕವಾಗಿ ಉಪಯೋಗ ಮಾಡುವುದಿಲ್ಲವೆಂದು ಹೇಳಿದ್ದಾರೆ. ಒಂದು ವರ್ಷದ ಅವಧಿಯಲ್ಲಿ ಸಚಿವರ ಉಪಯೋಗಕ್ಕಾಗಿ ಹೊಸ ಕಾರುಗಳನ್ನು ಕೊಳ್ಳಲಿಲ್ಲವೆಂದು ಹೇಳಿದ್ದೂ ಸಾಕಷ್ಟು ಸಮಾಧಾನವನ್ನುಂಟು

ಮಾಡಿದೆ. ಹಿಂದಿನ ಸರ್ಕಾರ ಕೂಡ ಕಾರುಗಳೇ ಬಹಳವಿದ್ದರೆ ಅವುಗಳನ್ನು ಮಾರಾಟ ಮಾಡಬಹುದು. ಆ ದೃಷ್ಟಿಯಿಂದ ಈ ಒಂದು ತಿದ್ದುಪಡಿ ಕೂಡ ಸೂಕ್ತವಾಗಿದ್ದರೆ ಅದನ್ನು ಪೋಡಿಕೊಂಡು ಮಾಡ ಬಹುದು.

ಶ್ರೀ ಬಿ. ಎಸ್. ಎಡಿಯೂರಪ್ಪ (ಶಿಕಾರಿಪುರ).—ಮಾನ್ಯ ಉಪಾಧ್ಯಕ್ಷರೆ, ಈಗ ವಿನಯ ಹೆಲಿಕ್ಯಾಪ್ಟರನ್ನು ಇತರೆ ಮಂತ್ರಿಗಳು ಉಪಯೋಗ ಮಾಡಬೇಕೆಂದು ತಿದ್ದುಪಡಿ ತಂದಿದ್ದಾರೆ ಇದನ್ನು ನೋಡಿದ ಮೇಲೆ ನನಗೆ ಅನುಮಾನ ಬರುತ್ತಿದೆ. ಕಳೆದ ಒಂದು ವರ್ಷದಿಂದ ಸನ್ಯಾಸಿಗಳಂತೆ ಇದ್ದವರು ಈಗ ಸಂಸಾರದ ಬಗ್ಗೆ ಚಿಂತೆ ಮಾಡುವುದಕ್ಕೆ ಹೊರಟರಲ್ಲ ಎಂದು ಸಂಶಯ ಬರುತ್ತಿದೆ. ನಿಜಕ್ಕೂ ಇಡೀ ಕರ್ನಾಟಕದ ಜನತೆ ಮಂತ್ರಿಮಂಡಲದವರು ನಡೆದುಕೊಳ್ಳತಕ್ಕ ರೀತಿಯ ಬಗ್ಗೆ ಮೆಚ್ಚಿಗೆ ವ್ಯಕ್ತ ಮಾಡಿ ದ್ದಾರೆ. ಈ ಸಂದರ್ಭದಲ್ಲಿ ಅದರ ಅವಶ್ಯಕತೆ ಇದೆ ಎಂದು ಹೇಳಿದ್ದರೆ ಅದಕ್ಕೆ ವಿರೋಧವಿಲ್ಲ. ಇವತ್ತಿನ ದಿವಸ ಇಡೀ ರಾಜ್ಯದ ಜನತೆ ಸರ್ಕಾರದ ಕಡೆ ನೋಡುತ್ತಿದೆ. ಎಷ್ಟೇ ಸೌಲಭ್ಯಗಳು ಕಡಿಮೆ ಇದ್ದರೂ ಪರವಾಗಿಲ್ಲವೆಂದು ಜನರ ಬಗ್ಗೆ ಚಿಂತೆ ಮಾಡುವ ಕಾಲದಲ್ಲಿ ಅವರ ಭಾವನೆಗೆ ಧಕ್ಕೆ ಬಾರದಂತೆ ನಡೆದುಕೊಳ್ಳಬೇಕೆಂಬುದನ್ನು ಯೋಚನೆ ಮಾಡಬೇಕು. ಶಾಶ್ವತವಾಗಿ ನಾವೇ ಇದ್ದು ಹೆಲಿಕ್ಯಾಪ್ಟರ್ ವ್ಯವಸ್ಥೆ ನೋಡಿಕೊಳ್ಳುತ್ತೇವೆಂಬ ಭಾವನೆ ಇರಬಾರದು. ದಯಮಾಡಿ, ಹಿಂಗಿರುವ ಸೌಲಭ್ಯಗಳು ಸಾಕು. ಅಂತಹ ವಿಶೇಷ ಸಂದರ್ಭಗಳಲ್ಲಿ ಮುಖ್ಯ ಮಂತ್ರಿಗಳು ಜೊತೆಯಲ್ಲಿ ಬರುತ್ತಾರೆ, ಆಗ ಅದನ್ನು ಉಪಯೋಗ ಮಾಡಿಕೊಳ್ಳುವುದಕ್ಕೇನೂ ಅಭ್ಯಂತರವಿಲ್ಲ. ಈ ಬಗ್ಗೆ ಯೋಚಿಸಬೇಕು. ಕಾರಿನ ಬಗ್ಗೆಯೂ ಅಷ್ಟೆ. ಎಲ್ಲೇ ಸಂಚಾರ ಮಾಡಿದರೂ ಪ್ರತಿಯೊಂದು ಸರ್ಕಾರೀ ಕಾರುಗಳಿಗೂ ಸಣ್ಣಪುಟ್ಟ ರಿಪೇರಿಗಳ್ಳಲ್ಲ ಪ್ರೊವಿಷನ್ ಮಾಡುತ್ತಾ ಹೋದರೆ, ಆದು ಈಗ ಇಲ್ಲ ಮುಂದಾದರೂ ದುರುಪಯೋಗ ವಾಗಬಹುದೂ. ಅದ್ದರಿಂದ ತಿದ್ದುಪಡಿ ಮಾಡುವಾಗ ಎಚ್ಚರಿಕೆಯಿಂದ ಮಾಡಬೇಕು. ಈ ಬಗ್ಗೆ ಸರ್ಕಾರದ ಬಗ್ಗೆ ಬೇರೆ ಭಾವನೆಯನ್ನು ಜನರು ತಾಳಬಾರದೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಸೂರ್ಯನಾರಾಯಣರಾವ್ ಅವರು ಕಾರಿನ ಬಗ್ಗೆ ತಂದಂತಹ ತಿದ್ದುಪಡಿ ಬಗ್ಗೆ ಹೇಳುವುದಾದರೆ, ಒಂದು ಹಳ್ಳಿಯಲ್ಲಿ ಕಾರು ಕೆಟ್ಟರೆ ಅಲ್ಲಿ ಬೇರೆ ಕಾರು ಸಿಗುವುದಿಲ್ಲ. ಕಾರು ಸಿಗಬೇಕೆಂದರೆ ಕೆಲವು ಕಡೆ ನಲವತ್ತು-ಐವತ್ತು ಕಿಲೋಮೀಟರ್ ದೂರ ಹೋಗಬೇಕಾಗುತ್ತದೆ. ಅಂತಹ ಸಂದರ್ಭಗಳಲ್ಲಿ ಅಷ್ಟು ದೂರ ಹೋಗುವ ಖರ್ಚನ್ನು ಯಾರು ಕೊಡಬೇಕು ? ಅವರು ಪೆಡ್ರೋಲ್ ರೇಟನ್ನೂ ಕೊಡಬೇಕೆಂದು ಹೇಳುತ್ತಿದ್ದಾರೆ. ಅದಕ್ಕೆ ಮಂತ್ರಿಗಳು ಏನು ಹೇಳುತ್ತಾರೆಂದರೆ ಪೆಡ್ರೋಲ್ ರೇಟಿಗಿಂತ ಕಡಿಮೆ ಆಗ ಬಹುದು ಆಥವಾ ಹೆಚ್ಚು ಆಗಬಹುದು, ಒಂದು ವೇಳೆ ಕಾರು ಇಲ್ಲವೆಂದರೆ ಬೇರೆ ವ್ಯವಸ್ಥೆ ಮಾಡಿಕೊಂಡು ಬರಬೇತಾಗುತ್ತದೆ ಎಂದು. ಅದಕ್ಕೋಸ್ಕರ ಸರ್ಕಾರದವರು ಏನೂ ತಿದ್ದುಪಡಿ ತಂದಿದ್ದಾರೆ ಅದು ಯೋಗ್ಯವಾಗಿದೆ ಎಂದು ಹೇಳಿ ಅದಕ್ಕೆ ನನ್ನ ಬೆಂಬಲವನ್ನು ವ್ಯಕ್ತಪಡಿಸುತ್ತೇನೆ.

ಶ್ರೀ ಭೀಮಣ್ಣ ಖಂಡ್ರೆ.—ಈ ಮಸೂದೆ ನೋಡಿದರೆ ಉರ್ದುವಿನ ಗಾದೆಯೊಂದು ನೆನಪಾಗುತ್ತದೆ. (.....) ಈ ಪ್ರಕಾರ. ಹಿಂದೆ ಜನತಾ ಪಕ್ಷದವರು ಎಷ್ಟೋ ಸಾರಿ ಮುಖ್ಯ ಮಂತ್ರಿಗಳು ಹೆಲಿಕ್ಯಾಪ್ಟರನ್ನು ಉಪಯೋಗ ಮಾಡುವ ಬಗ್ಗೆ ಟೀಕೆ ಮಾಡಿದ್ದಾರೆ. ಈಗ ಅವರ ಬಾಯಿಂದಲೇ ಬರುತ್ತಿದೆ. ಅದನ್ನು ಒಬ್ಬರು ಮಾತ್ರವಲ್ಲ ಎಲ್ಲರೂ ಉಪಯೋಗ ಮಾಡುತ್ತೇವೆ ಎಂದು.

ಶ್ರೀ ಆರ್. ಎಲ್. ಜಾಲಪ್ಪ.—ನಮ್ಮ ಒಂದು ವರ್ಷದ ಖರ್ಚು ಎಷ್ಟು, ನಿಮ್ಮ ಖರ್ಚು ಎಷ್ಟು ಎಂಬುದನ್ನು ನೋಡಿ. ನಾವು ಎಷ್ಟು ಸಾರಿ ಹೆಲಿಕ್ಯಾಪ್ಟರನ್ನು ಉಪಯೋಗ ಮಾಡಿದ್ದೇವೆ ಮತ್ತು ನಿಮ್ಮ ಮುಖ್ಯ ಮಂತ್ರಿಗಳು ಎಷ್ಟು ಸಾರಿ ಉಪಯೋಗ ಮಾಡಿದ್ದಾರೆಂಬುದನ್ನು ತಾಳೆ ನೋಡಿ.

ಶ್ರೀ ಎಸ್. ಆರ್. ಲಕ್ಷ್ಮಯ್ಯ —ಹಿಂದೆ ಮಂತ್ರಿಗಳ ಕಾರಿನ ಹಿಂದೆ ಪೋಲೀಸರ ಕಾರು ಹೋಗಿ ತ್ತು. ಇಪ್ಪೆಲ್ಲ ಇದ್ದರೂ ನಾವಿಕೆ ಇಲ್ಲದೆ ವಾತನಾಡುತ್ತಾರೆ.

ಶ್ರೀ ಭೀಮಣ್ಣ ಖಂಡ್ರೆ —ಇವತ್ತಿನ ದಿವಸ ಅವರಿಗೆ ನೀತಿ ನಿಯಮ ಏನೂ ಇಲ್ಲ. ಹೇಳುವುದು ಒಂದು ನಡೆಯುವುದೂ ಮತ್ತೊಂದು ; ಆಕ್ಷೇಪಣೆ ಮಾಡುವುದು ಒಂದು ನಡೆಯುವುದು ಮತ್ತೊಂದು ಆಗಿದೆ. ನೀವು ಈಗ ಏನು ಮಸೂದೆ ತಂದಿದ್ದೀರಿ ಇದನ್ನು ನೋಡಿದರೆ ನೀವು ಹೇಳುವುದು ಒಂದೂ ನಡೆಯುವುದು ಮತ್ತೊಂದು ಎಂದು ತೋರುತ್ತದೆ. ಇವತ್ತಿನ ದಿವಸ ಹೆಲಿಕ್ಯಾಪ್ಟರ್ ಮತ್ತು ಕಾರು ಗಳನ್ನು ಉಪಯೋಗಿಸುವ ಬಗ್ಗೆ ತಂದಿರುವ ತಿದ್ದುಪಡಿ ನೋಡಿದರೆ ಅಮೆರಿಕಾದಲ್ಲಿ ಚಂದ್ರಲೋಕಕ್ಕೆ ಹೋಗುವುದಕ್ಕೆ ಹೇಗೆ ವ್ಯವಸ್ಥೆ ಮಾಡಿದ್ದಾರೆ ಅದರಂತೆ ನಮ್ಮ ಮಂತ್ರಿಗಳ ಸಲುವಾಗಿ ಆ ಒಂದು ಅವಕಾಶ ಸಿಗುವಂತೆ ತಿದ್ದುಪಡಿ ತಂದರೆ ಒಳ್ಳೆಯದೆಂದು ಸಲಹೆ ಮಾಡುತ್ತೇನೆ !

ಶ್ರೀ ಎಫ್. ಎ. ಕೊಪ್ಪದ್.—ಮುಖ್ಯ ಮಂತ್ರಿಗಳು ಕಾರು ಹೆಲಿಕಾಪ್ಟರ್ ಬಗ್ಗೆ ಹೇಳುತ್ತಿದ್ದಾರೆ. ಆದರೆ ಇವತ್ತಿನ ದಿವಸ ನಮ್ಮ ಹಳ್ಳಿಯಲ್ಲಿ ಕುಡಿಯುವುದಕ್ಕೆ ನೀರಿಲ್ಲ, ಆರ್ಥಿಕ ಪರಿಸ್ಥಿತಿ ಬಹಳ ಬಿಗಿಯಾಗಿದೆ, ಬಡವರ ಸಂಖ್ಯೆ ಹೆಚ್ಚಾಗುತ್ತಿದೆ. ಇದರ ಬಗ್ಗೆ ಯೋಚನೆ ಮಾಡಬೇಕು. ಮಂತ್ರಿಗಳ ಕಾರು ಏನಾದರೂ ಕೆಟ್ಟರೆ ತಾಲ್ಲೂಕು ಬೋರ್ಡಿನಲ್ಲಿ ಕಾರು ಜೀಪುಗಳು ಇರುತ್ತವೆ. ಬೇಕಾದರೆ ಅವುಗಳನ್ನು ಉಪಯೋಗ ಮಾಡಿಕೊಳ್ಳಬಹುದು. ಒಟ್ಟಿನಲ್ಲಿ ಖರ್ಚು ಕಡಿಮೆ ಮಾಡಿ ಆ ಹಣವನ್ನು ಬಡವರ ಏಳಿಗೆಗಾಗಿ ಉಪಯೋಗ ಮಾಡಿ ಎಂದು ಇಷ್ಟು ಮಾತ್ರ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈ ಮಂಸೂದೆಯನ್ನು ಗಮನಿಸಿದಾಗ ಮಂತ್ರಿಗಳು ಸರ್ಕಾರಕ್ಕೆ ಬಾಕಿ ಕೊಡಬೇಕಾದುದು ಇದೆ ಎಂದು ಗೊತ್ತಾಗುತ್ತದೆ. ಆ ರೀತಿ ಏನಾದರೂ ಬಾಕಿ ಬರಬೇಕಾದುದು ಇದ್ದರೆ ಯಾರ್ಯಾರು ಎಷ್ಟೆಷ್ಟು ಕೊಡಬೇಕಾಗುತ್ತದೆಂಬುದನ್ನು ದಯವಿಟ್ಟು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—(ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರದ ಮಂತ್ರಿಗಳು)

ಮಾನ್ಯ ಉಪಾಧ್ಯಕ್ಷರೆ. ಕೆಲವು ವಿಚಾರಗಳನ್ನು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಮೊಟ್ಟ ಮೊದಲನೆಯದಾಗಿ ಮಾನ್ಯ ವಿರೋಧಪಕ್ಷದ ನಾಯಕರು ಈ ತಿದ್ದುಪಡಿ ಮಸೂದೆಯ ಮೇಲೆ ಮಾತನಾಡತಕ್ಕ ಸಮಯದಲ್ಲಿ ಹಲವಾರು ವಿಷಯಂಗಳನ್ನು ಪ್ರಸ್ತಾಪ ಮಾಡಿದ್ದಾರೆ. ಈ ಚೌಕಟ್ಟಿಗೆ ಬರದೇ ಇರತಕ್ಕ ವಿಷಯಗಳ ಬಗ್ಗೆಯೂ ಮಾತನಾಡತಕ್ಕ ಪ್ರಯತ್ನ ಮಾಡಿ ಹಲವು ಉದಾಹರಣೆಗಳನ್ನು ಕೂಡ ಕೊಟ್ಟಿದ್ದಾರೆ. ಅವರ ಭಾಷಣಕ್ಕೆ ಅಡ್ಡಿ ತರಬೇಕು ಎಂದು ನಾನು ಬಯಸುವುದಿಲ್ಲ. ಇಷ್ಟು ಮಾತ್ರ ಸೌಜನ್ಯದಿಂದ ನಿವೇದಿಸಿಕೊಳ್ಳುವುದಕ್ಕೆ ಇಷ್ಟಪಡುತ್ತೇನೆ. ಈ ತಿದ್ದುಪಡಿ ಮಸೂದೆಯ ಪರಿಮಿತಿಯಲ್ಲಿ ಅವರ ಟೀಕೆ ಟಿಪ್ಪಣಿಗಳು ಬರುವುದಿಲ್ಲ ಎಂಬ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅವರ ವಿಚಾರ ವೇದಿಕೆ, ಸಮಯ ವೈಶಾಲ್ಯತೆ ಅಪಾರವಾದುದು ಆಗಾಧವಾದುದು ಅದನ್ನು ಯಾರೂ ಮೊಟಕು ಮಾಡತಕ್ಕ ಸನ್ನಿವೇಶ ಇರುವುದಿಲ್ಲ. ಅಂಥ ಸನ್ನಿವೇಶ ಇಲ್ಲವೊ ಇಲ್ಲ. ನಾನೂ ಸ್ವಲ್ಪ ಕಾಲ ಆ ಜಾಗದಲ್ಲಿ ಕುಳಿತಿದ್ದವನು. ಆಗ ನನಗೇನೂ ತೊಂದರೆ ಇರಲಿಲ್ಲ. ಅವರಿಗೂ ಏನೂ ತೊಂದರೆ ಇಲ್ಲ ಎಂಬುದಾಗಿ ನಾನು ಭಾವಿಸುತ್ತೇನೆ. ಮಾನ್ಯ ವಿರೋಧಪಕ್ಷದ ನಾಯಕರು ನಿನ್ನೆ ಮುಖ್ಯಮಂತ್ರಿಗಳು ಮಾಡಿದ ಭಾಷಣದ ಮೇಲೆ ಟೀಕೆ ಟಿಪ್ಪಣಿಗಳನ್ನು ಮಾಡಿದರು. ಅದನ್ನು ರಾಜ್ಯಪಾಲರ ಭಾಷಣದ ಮೇಲೆ ನಡೆಯುವ ಚರ್ಚೆಯಲ್ಲಿ ಮಾಡಬಹುದಾಗಿತ್ತು. ಆ ಚರ್ಚೆಗೆ ಮೂರು ನಾಲ್ಕು ದಿವಸವನ್ನು ಪ್ರತ್ಯೇಕವಾಗಿಟ್ಟಿದೆ. ಆಗ ಅವರು ತಮ್ಮ ವಾದಸರಣಿಯನ್ನು ಅವಿಚ್ಛಿನ್ನವಾಗಿ ಪೂರ್ಣಾನುಪೂರ್ಣವಾಗಿ ಮಂಡಿಸುವುದಕ್ಕೆ ಅವಕಾಶವಿದೆ. ಈ ವಿಷಯಕ್ಕೆ ಪ್ರಕೃತವಲ್ಲದೇ ಇರತಕ್ಕ ವಿಚಾರವನ್ನು ಅವರು ಇಟ್ಟರಲ್ಲ ಎಂಬ ವಿಷಾದ ನನಗಾಗಿದೆ. ಮುಖ್ಯಮಂತ್ರಿಗಳು ಎನ್. ಎಸ್. ಎ. ಅನ್ನು ರಾಜಕೀಯ ವಿರೋಧಿ ನಾಯಕರ ಮೇಲೆ ಉಪಯೋಗಿಸುತ್ತೇವೆಂದು ಹೇಳಿ ಹೆದರಿಸಿದ್ದಾರೆ, ಅದನ್ನು ನಾನು ಸಹಿಸುವುದಿಲ್ಲ. ಎಂದು ಹೇಳಿದ್ದಾರೆ. ಆ ರೀತಿ ಯಾರು ಹೇಳಿದ್ದಾರೆ ? ರಾಷ್ಟ್ರೀಯ ಭದ್ರತಾ ಕಾಯಿದೆಯನ್ನು ರಾಜಕೀಯ ದವರ ಮೇಲೆ ಉಪಯೋಗ ಮಾಡುತ್ತೇವೆ ಎಂದು ಹೇಳಲಿಲ್ಲ. ಯಾರು ಯಾರಂ ಅಂಶಾತಿಯನ್ನು ಹಬ್ಬಿಸಿ ಹಿಂಸಾತ್ಮಕ ಕಾರ್ಯಗಳಲ್ಲಿ ತೊಡಗಿ ಸರ್ಕಾರಿ ಮತ್ತು ಖಾಸಗಿ ಆಸ್ತಿಪಾಸ್ತಿಗಳನ್ನು ನಾಶ ಮಾಡುವುದಕ್ಕೆ ಪ್ರಯತ್ನಪಡುತ್ತಾರೋ ಅಂಥವರ ಮೇಲೆ ಆ ಕಾಯಿದೆಯನ್ನು ಉಪಯೋಗಿಸುವುದಕ್ಕೆ ಹಿಂತೆಗೆಯುವುದಿಲ್ಲ ಎಂದು ಹೇಳಿದ್ದಾರೆ. ಪಾರ್ಲಿಮೆಂಟಿನಲ್ಲಿ ಮತ್ತು ನಿಮ್ಮ ಪಕ್ಷದ ಸರ್ಕಾರ ಅಧಿಕಾರದಲ್ಲಿದ್ದಂಥ ರಾಜ್ಯಗಳಲ್ಲಿ ಇಂಥ ಕರಾಳ ಶಾಸನವನ್ನು ಜಾರಿಗೆ ತಂದು ರಾಜಕೀಯ ವಿರೋಧಿಗಳ ಮೇಲೆ ಉಪಯೋಗಿಸುವುದಿಲ್ಲ ಎಂದು ಭಾಷಣ ಮಾಡಿ ದುರುಪಯೋಗಪಡಿಸಿದ ಸನ್ನಿವೇಶಗಳು ಈ ದೇಶದ ಚರಿತ್ರೆಯಲ್ಲಿ ಅತ್ಯಂತ ಗಪ್ಪು ಅಕ್ಷರಗಳಲ್ಲಿ ಬರೆಯಬಂಥದ್ದಾಗಿದೆ. ಇಷ್ಟೆಲ್ಲಾ ಗೊತ್ತಿದ್ದರೂ ನನ್ನ ಪ್ರಿಯ ಸ್ನೇಹಿತರಾದ ಮೊಯಿಲಿಯವರು ಈ ವಿಷಯವನ್ನು ಪ್ರಸ್ತಾಪ ಮಾಡಿದರಲ್ಲ ಎಂದು ನನಗೆ ವಿಷಾದವಾಗುತ್ತಿದೆ. ನಾನು ಅತ್ಯಂತ ಸ್ಪಷ್ಟವಾದ ಮಾತುಗಳಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ, ಈ ಒಂದು ವರ್ಷದ ಅವಧಿಯಲ್ಲಿ ಈ ಕಾಯಿದೆಯನ್ನು ದುರುಪಯೋಗಪಡಿಸಿಕೊಂಡಿಲ್ಲ ಎಂಬುದನ್ನು ಸಾಕ್ಷೀಭೂತವಾಗಿ ಅನುಷ್ಠಾನದಲ್ಲಿ ತೋರಿಸಿದ್ದೇವೆ. ಹಿಂದೆ ಮಂತ್ರಿಗಳು ಪ್ರಯಾಣಕ್ಕೆ ಹೊರಟಾಗ ಪೋಲೀಸ್ ವಾಹನಗಳು, ಪೋಲೀಸ್ ಸಿಬ್ಬಂದಿಗಳನ್ನು ಉಪಯೋಗಿಸಿ ಹೊಸದಾಗಿ ಖರ್ಚುಗಳನ್ನು ಮಾಡಿದ ವಿಷಯ ಈ ಸಭೆಯಲ್ಲಿ ಉಲ್ಲೇಖವಾಗಿದೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಜನ ಹೊಡೆಯಂತ್ತಿದ್ದರಂ. ಅದಕ್ಕೆ ಅವರಂ ಇನ್ನೇವ್ ಮಾಡಬೇಕಾಗಿತ್ತು ?

ಶ್ರೀ ಎ. ಲಕ್ಷ್ಮೀಸಾಗರ್.—ನಾವು ಇದನ್ನ ದುರುಪಯೋಗಪಡಿಸಿಕೊಳ್ಳತಕ್ಕ ಸಂದರ್ಭ ಬರಂವುದಿಲ್ಲ. ನಾವು ಆ ರೀತಿ ಮಾಡುವುದಿಲ್ಲ ಎಂದು ಸರ್ಕಾರದ ಪರವಾಗಿ ವಚನ ಕೊಡುವುದಕ್ಕೆ ಇಷ್ಟಪಡುತ್ತಿದ್ದೇನೆ. ಕಾರ್ ಉಪಯೋಗಿಸುವ ಬಗ್ಗೆ ಹೇಳಿದ್ದಾರೆ. ಈ ವಂಸೂದೆ ಹಿಂದಿನ ಸರ್ಕಾರದವರು ತಂದ ತಿದ್ದುಪಡಿ ವಂಸೂದೆ, ನಮ್ಮದಲ್ಲ. ವಂತ್ರಿಗಳು ಎಲ್ಲಾದರೂ ಹೋದಾಗ ಕಾರ್ ಕೆಟ್ಟುಹೋದರೆ ಬೇರೆ ಟ್ಯಾಕ್ಸಿಯಲ್ಲಿ ಹೋಗಬೇಕಾಗಿದ್ದು ಆ ಟ್ಯಾಕ್ಸಿ ದಾಡಿಗೆ ಕ್ಲೈಮ್ ಮಾಡುವುದಕ್ಕೆ ಬಿಲ್ ಕೊಡಬೇಕಾದ ಸಂದರ್ಭ ಬಂತು. ಆ ರೀತಿ ಬಿಲ್ ಕೊಟ್ಟಾಗ ಅಕೌಂಟೆಂಟ್ ಜನರಲ್ ಅವರು ಬಿಲ್ ಪಾಸ್ ಮಾಡುವುದಕ್ಕೆ ಬರುವುದಿಲ್ಲ ಎಂದು ಆಕ್ಷೇಪಣೆ ಎತ್ತಿ ಕಾಗದ ಬರೆದಿದ್ದರು ೧೯೭೨ನೇ ಇಸವಿಯಲ್ಲೇ ಅವರು ಬರೆದಿದ್ದಾರೆ. ಈ ಮೋಟಾರ್ ವಾಹನ ಉಪಯೋಗಿಸತಕ್ಕ ಸವಂಯದಲ್ಲಿ ಎಲ್ಲಾದರೂ ಕೆಟ್ಟು ಹೋದರೆ ಬೇರೆ ವಾಹನ ಪಡೆಯುವುದಕ್ಕೆ ಹಣ ಕೊಡಬೇಕಾದ ಪರಿಸ್ಥಿತಿ ಬರುತ್ತದೆ.

SRI Y. RAMAKRISHNA.—Either actuals or scheduled rate which ever is lesser.

ಎಂದು ಮಾಡಬೇಕೆಂದಿಟ್ಟಿದ್ದೆವು. ಅದನ್ನು ನೀವು ಬಿಟ್ಟಿದ್ದೀರಿ ಎಂದು ಚ್ಚಾಪಿಸಿದೆ.

ಶ್ರೀ ಎ. ಲಕ್ಷ್ಮೀಸಾಗರ್.—ಇದು ಯಾವಾಗಲೂ ಆಗುವುದಿಲ್ಲ. ಆಕಸ್ಮಾತ್ತಾಗಿ ರಾತ್ರಿ ಸಮಯ ಆಗಬಹುದು, ಆ ವೇಳೆಯಲ್ಲಿ ಆಗಬಹುದು. ನಮಗೆ ಸಿಗತಕ್ಕ ಟ್ಯಾಕ್ಸಿಯಲ್ಲಿ ವೀಟರ್ ಇರುತ್ತದೋ ಇಲ್ಲವೋ, ಹೇಗೆ ಲೆಕ್ಕ ಹಾಕುವುದು ?

ಶ್ರೀ ಎಂ ಎಸ್. ಕೃಷ್ಣನ್.—Actuals ಎಂದು ಹಾಕಿದ್ದೀರಿ. ಅದರ ಬದಲು which ever is less ಎಂದು ಹಾಕಬಹುದಾಗಿತ್ತು ಎಂಬುದು ನಮ್ಮ ವಾದ.

ಶ್ರೀ ಎ. ಲಕ್ಷ್ಮೀಸಾಗರ್.—ಇದರಲ್ಲಿರುವುದು ವರ್ಬಲಾಜಿಕಲ್ ಡಿಫರೆನ್ಸ್ ಅಷ್ಟೆ. ಮುಂದೆ ಏನಾದರೂ ಲೋಪದೋಷ ಕಂಡುಬಂದರೆ ತಿದ್ದುಪಡಿ ಮಾಡೋಣ. ಈ ಮನೆಯ ಕಾರ್ಯಕಲಾಪದ ಒಂದು ಭಾಗವನ್ನು ನಾನು ಸಭೆಯ ಗಮನಕ್ಕೆ ತರುತ್ತಿದ್ದೇನೆ. ಅದಂ ಈ ರೀತಿ ಇದೆ

> "While furnishing replies to starred L.A. question No. 288, by Sri A. Lakshimsagar M.L.A. in the matter of maintenance of State Helicopter and the officiol car used by the Chief Minister, M.L.A. wanted to know under what provisions of the rules that the Helecopter is being usebby the Cheif Minister on afficial purposes. No material wasavilable in the rules annexed to the Goveinment Circular No. P W D 1079 dated 9-1-79 issued by the P. W. D. to answer except that the Helicopter shall be used only by the Governor, Chief Minister and other Ministers of Government of Karnataka that no non-official shall be permitted to travel in it except with the prior permission of Government and that all flight orders to the Pilots shall be issued only from the P.W.D."

ಇದಕ್ಕೆ ಮೊದಲುಪ್ರಾವಿಷನ್ ಇರಲಿಲ್ಲ. ಹೆಲಿಕ್ಯಾಪ್ಟರ್‌ಗೆ ಖರ್ಚು ಮಾಡುವುದಕ್ಕೆ ವಿಯಮಾವಳಿ ಇರಲಿಲ್ಲ. ಅದನ್ನು ಇದರಲ್ಲಿ ಈಗ ಆಳವಡಿಸಿದ್ದೇನೆ. ಇದನ್ನು ಮಾಡಿದವರು ಅವರೆ, ನಾವಲ್ಲ. Iam only trying to hold the baby. ಇದರಲ್ಲಿ ದುರುಪಯೋಗಪಡಿಸಿಕೊಳ್ಳತಕ

ಸನ್ನಿವೇಶ ಇಲ್ಲ. ಆ ರೀತಿ ಮಾಡುವುದಿಲ್ಲ ಎಂಬ ಭರವಸೆಯನ್ನು ನಾನು ನಿಷ್ಠೆಯಿಂದ ಸರ್ಕಾರದ ಪರವಾಗಿ ಕೊಡಬಯಸುತ್ತೇನೆ.

MR. DEPUTY SPEAKER.—The question is.

"That the Karnataka Ministers' Salaries and Allowances (Amendment) Bill, 1983 be taken into consideration"

The motion was adopted

SRI LAXMI SAGAR.—clause lay clause eonsiderntion

"That in clause 1, after sub-clause (1), the followiog sub-clause shall be inserted namely.—

(2) It shall come into force at once.

2. In Clause 2, after the words "Every Minister" the words "Minister of state or Deputy Minister" shall be inserted."

MR. DEPUTY SPEAKAR. —The question is.

"That in Clause 1, after sub-clause (1), the following sub-clause shall be inserted namely.—

(2) It shall come into force at once.

2. In Clause 2, after the words "Every Minister" the words "Minister of State or Deputy Minister", shall be inserted."

The motion was adopted

Clause 2 and 3

MR. DEPUTY SPEAKER.—The question is.

"That Clauses 2 and 3, as amended, stand part of the Bill.

The motion was adopted

Clause 2 and 3, as amended, wear added to the Bill

CLAUSE 1 ETC.,

MR. DEPUTY SPEAKER.—The question is.

"That Clause 1, the Long Title, the Preamble and the Enacting Formula do stand part of the Bill."

The Motion was adopted

Clause 1, the Long Title the Prgamble and the Enacting Formulv were added to the Bill.

MOTION TO PASS

SRI A. LAKSHMI SAGAR.—(Minister for law and Parliamentary Affairs).—Sirf I beg to move.

"That the Karnataka Ministers' Salaries and Allowanes (Amendment) Bill 1983, as amended, be passed."

MR. DEPUTY SPEAKER.—The question is.

"That the Karnataka Ministers' Salaries and Allowances (Amendment) Bill 1983, as amended, be passed."

The motion was adopted and the Bill was passed

ಅಧ್ಯಕ್ಷರು —ಈಗ ಸಭೆಯು ಮೇಲಕ್ಕೆದ್ದು ನಾಳೆ ಬೆಳಗ್ಗೆ ೧೧–೦೦ ಗಂಟೆಗೆ ಪುನಃ ಸೇರುತ್ತದೆ.

(ಸಭೆಯು ಐದು ಘಂಟೆ ಐವತ್ತೈದು ನಿಮಿಷಕ್ಕೆ ಮುಕ್ತಾಯವಾಗಿ, ಪುನಃ ಹತ್ತೊಂಭತ್ತನೆ ಜನವರಿ ಮಾಹೆ ೧೯೮೪ರ ಗುರುವಾರದಂದು ಹನ್ನೊಂದು ಘಂಟೆಗೆ ಸೇರಲು ನಿಶ್ಚಯಿಸಲಾಯಿತು.)